# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 01.09.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ನಾಜಿನಿ ಬೇಗಂ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿ |
| 4 | ಜೆ. ಭುವನೇಶ್ವರಿ | ಸದಸ್ಯರು | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 5 | ಎಲ್.ನಾಗರತ್ನ | ಸದಸ್ಯರು | |
| 6 | ರವೀಂದ್ರನ್ ಕೆ | ಸದಸ್ಯರು | |
| 7 | ಎನ್. ಶಾಂತಕುಮಾರಿ | ಸದಸ್ಯರು | |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 10 | ರಾಜಣ್ಣ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ:17.01.2007ರಂದು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/141/ಎಂಎಲ್ಆರ್/2006ರಂತೆ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದಕ್ಕಿಂತ ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣ 226 ಚ.ಕಿ.ಮೀ ಗಳಾಗಿದ್ದು, ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ. ವಿಸ್ತರಣಗೊಂಡಿದ್ದು, ಜನಸಂಖ್ಯೆಯು ಸುಮಾರು 80 ಲಕ್ಷ ಇರಬಹುದಾಗಿ ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಕಾರ್ಯಕ್ಷೇತ್ರ ವಿಸ್ತರಣಗೊಂಡಿದ್ದು, ಇದಕ್ಕೆ ಅನುಗುಣವಾಗಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಕಾರಣ ಸಾಮಾನ್ಯ ಆಡಳಿತ, ಕಂದಾಯ, ಕಾಮಗಾರಿ, ಆರೋಗ್ಯ, ತೋಟಗಾರಿಕೆ, ನಗರ ಯೋಜನೆ, ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಅರಣ್ಯ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸದ ಒತ್ತಡ/ಪ್ರಮಾಣ ಹೆಚ್ಚಾಗಿದ್ದು, ಅಗತ್ಯ ಮೂಲಭೂತ ಸೌಕರ್ಯಗಳನ್ನು ಬೆಂಗಳೂರಿನ ಜನತೆಗೆ ಕಲ್ಪಿಸಲು ಮೇಲ್ಕಂಡ ಎಲ್ಲಾ ಪಾಲಿಕೆಯ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಬೇಕಾದ ಅನಿವಾರ್ಯತೆ ಇರುತ್ತದೆ. ಗುಣಮಟ್ಟದ ಮಾನವ ಸಂಪನ್ಮೂಲವಿಲ್ಲದೆ ಅಂತರ್ ರಾಷ್ಟ್ರೀಯ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸುವುದು/ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಕಳೆದ 40 ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅತಿ ಮುಖ್ಯವಾಗಿ ಆಡಳಿತ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿರುತ್ತದೆ, ಹೊಸ ಸವಾಲುಗಳು ಎದುರಾಗಿರುತ್ತವೆ, ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು, ಸವಾಲುಗಳಿಗೆ ಸರಿಯಾದ ಉತ್ತರಗಳನ್ನು ಕೊಡುವ ಪಾರದರ್ಶಕ ಮತ್ತು ಉತ್ತರದಾಯಿತ್ವಯುಳ್ಳ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುಂಚೆ (ಅಂದರೆ, ದಿನಾಂಕ: 17–01–2007ಕ್ಕಿಂತ ಮುಂಚೆ) ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಸಂಖ್ಯೆ:6,60,000–00 ಆಸ್ತಿಗಳಿದ್ದವು. ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತಮುತ್ತಲಿನ 110 ಗ್ರಾಮಗಳು, 7 ನಗರ ಸಭೆ ಮತ್ತು 1 ಪುರಸಭೆ ಪ್ರದೇಶಗಳನ್ನು ಒಳಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಒಟ್ಟು 15,00,000–00 ಆಸ್ತಿಗಳು ಇರುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ 650–00ಕೋಟಿಗಳಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.1,100ಕೋಟಿಗಳಷ್ಟು ಆಗಿರುತ್ತದೆ.

ದಿನಾಂಕ:17–01–2007ಕ್ಕಿಂತ ಮುಂಚೆ ಪಾಲಿಕೆ ವ್ಯಾಪ್ತಿಯಲ್ಲಿ 390 ಸಂಖ್ಯೆಯಷ್ಟು ಉದ್ಯಾನವನಗಳು ಇದ್ದವು, ಪ್ರಸ್ತುತ 673 ಸಂಖ್ಯೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನೂ 262 ಜಾಗಗಳಲ್ಲಿ ಸಮಗ್ರವಾಗಿ ಉದ್ಯಾನವನಗಳ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೆಟ್ರೋ ಯೋಜನೆಯನ್ನು ರೂ.6395ಕೋಟಿ ವೆಚ್ಚ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಂತರಾಷ್ಟ್ರಿಯ ವಿಮಾನ ನಿಲ್ದಾಣ ಕೂಡ ಈಗಾಗಲೇ ಅಭಿವೃದ್ಧಿ ಪಡಿಸಿದ್ದು, ಕಾರ್ಯಗತಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ 2084 ಸಂಖ್ಯೆಯಷ್ಟು ಐ.ಟಿ/ಬಿ.ಟಿ ಕಂಪನಿಗಳಿರುತ್ತವೆ. ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹೊಸ ಹುದ್ದೆಗಳ ಹಾಗೂ ಕೆಲವು ಅಗತ್ಯ ಹುದ್ದೆಗಳನ್ನು ಅಧಿಕವಾಗಿ ಸೃಷ್ಠಿಯಾಗಬೇಕಾಗಿರುತ್ತದೆ.

ಶ್ರೀಮತಿ ಹರಿಣಿ ವನಜ ಕುಮಾರಿ, ನಿವೃತ್ತ ಕೆ.ಎ.ಎಸ್ ರವರನ್ನು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಪಾಲಿಕೆಯಿಂದ ನೇಮಕಮಾಡಿಕೊಳ್ಳಲಾಗಿದೆ. ಸದರಿಯವರು ವಿವಿಧ ಇಲಾಖೆಗಳ ಹುದ್ದೆಗಳ ಕಾರ್ಯವೈಖರಿ ಬಗ್ಗೆ ಅಧ್ಯಯನ ನಡೆಸಿ, ಇಲಾಖಾ ಮುಖ್ಯಸ್ಥರೊಂದಿಗೆ ಚರ್ಚಿಸಿ, ಆಡಳಿತ ಇಲಾಖಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರು ನಡೆಸಿದ ಸಭೆಯ ನಡವಳಿಕೆಗಳ ಸೂಚನೆ ಅನುಸರಿಸಿ ಎಲ್ಲಾ ಹುದ್ದೆಗಳ ಕಾರ್ಯವೈಖರಿಯ ಪುನರಾವಲೋಕನೆ ಮಾಡಿ ಕರಡು ವೃಂದ ಮತ್ತು ನೇಮಕಾತಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಿಯಮಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಕರಡನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಷ್ಕರಣಾ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಕೆಲವೊಂದು ತಿದ್ದುಪಡಿಯೊಂದಿಗೆ ಸದರಿ ಕರಡನ್ನು ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನಡವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಯ ಹಿನ್ನಲೆಯಲ್ಲಿ ಅವಶ್ಯವಿಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು ಕೂಡ ಪ್ರಸ್ತಾಪಿಸಲಾಗಿದೆ. ಅತ್ಯಾವಶ್ಯಕವಾಗಿ ಬೇಕಾಗಿರುವ ಹುದ್ದೆಗಳನ್ನು ಸೃಜಿಸಲು/ ಹೆಚ್ಚುವರಿಗೊಳಿಸಲು ಅಥವಾ ಕಡಿಮೆ ದರ್ಜೆಗೊಳಿಸಲೂ ಸಹ ಪ್ರಸ್ತಾಪಿಸಲಾಗಿದೆ.

ಈ ಹೊಸ ಹುದ್ದೆಗಳನ್ನು ಸೃಜಿಸಿರುವುದರಿಂದ ಆಗುವ ಆರ್ಥಿಕ ಹೊರೆಯನ್ನು ಕೂಡ ಪರಿಗಣಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಕೆಲವು ಶ್ರೇಣಿಯ ಹುದ್ದೆಗಳು ಇಲ್ಲದೆ ಇದ್ದರೂ ಕೂಡ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆಗೆದುಕೊಂಡು ಮಹಾನಗರ ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಈಗ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಸೃಜಿಸಲು ಕಾನೂನಿನಲ್ಲಿ ಯಾವುದೇ ತೊಡಕು ಬಾರದಂತೆ ಕ್ರಮವಹಿಸಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಲ್ಲಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಲಗತ್ತು ನಿಗಧಿತ ನಮೂನೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 11-07-2012ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಟಿಪ್ಪಣಿ.

**<u>ನಿರ್ಣಯ:</u>**

*ಕರಡು ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ಕುರಿತಂತೆ ಇಂದಿನ ಸಭೆಯಲ್ಲಿ ಆಡಳಿತ ಶಾಖೆಯಿಂದ ಯಾವೊಬ್ಬ ಹಿರಿಯ ಅಧಿಕಾರಿಗಳು ಹಾಜರಿರದ ಕಾರಣ ಹಾಗೂ ಈ ಪ್ರಸ್ಥಾವನೆ ಕುರಿತಂತೆ ವಿಸ್ತೃತ ಚರ್ಚೆಯ ಅಗತ್ಯವಿರುವ ಕಾರಣ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆಯನ್ನು ದಿನಾಂಕ:10.09.1012ಕ್ಕೆ ನಿಗಧಿಪಡಿಸಲು ಮುಂದೂಡಿದೆ.*

Yogish. K

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/17/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ, ಹಿಂದಿ ಪಾಠಶಾಲೆಯಿಂದ ಸರ್ಕಾರದ ಆದೇಶದಂತೆ ಪಾಲಿಕೆಯ ಪ್ರಾಥಮಿಕ ಶಾಲೆಯಲ್ಲಿ ಎರವಲು ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರು ಮನವಿ ಸಲ್ಲಿಸಿ, ಸದರಿಯವರ ಪಾಲಿಕೆಯಲ್ಲಿನ ಎರವಲು ಸೇವಾವಧಿಯು ಒಂದು ಅಥವಾ ಎರಡು ವರ್ಷಗಳವರೆಗೆ ಮಾತ್ರ ಮುಂದುವರೆಸುತ್ತಿದ್ದು, ಇದರಿಂದ ಕೌಟುಂಬಿಕ ಜೀವನಕ್ಕೆ ತೊಂದರೆಯಾಗುತ್ತಿದೆ. ಅವರ ಪತಿ ಕರ್ನಾಟಕ ಸಚಿವಾಲಯದ ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದು ಅವರ ಸೇವೆಯು ವರ್ಗಾವಣೆ ರಹಿತ ಸೇವೆಯಾಗಿರುವುದರಿಂದ ಪತಿ ಪತ್ನಿಯರು ಒಟ್ಟಿಗೆ ಸೇವೆ ಸಲ್ಲಿಸಬೇಕೆಂಬ ನಿಯಮದಡಿ ಇವರ ಸೇವೆಯನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪುನರ್ ಪರಿಶೀಲಿಸಲು ಕೋರಿರುತ್ತಾರೆ.

ಹಾಗೂ ಶ್ರೀಮತಿ.ಆರ್.ಕೆ.ಇಂದಿರಮ್ಮ ಹಿಂದಿ ಶಿಕ್ಷಕರು ನೃಪತುಂಗ ವಿದ್ಯಾ ಸಂಸ್ಥೆ (ರಿ) ಪ್ರೌಢಶಾಲೆ, ತುಮಕೂರು ರವರನ್ನು ಪಾಲಿಕೆಯ ಸೇವೆಗೆ ವಿಲೀನಗೊಳಿಸಲು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 1(130) ರಂತೆ ದಿನಾಂಕ: 29-09-2004 ರಂದು ನಿರ್ಣಯಿಸಿರುವಂತೆ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆಯ ಸಂಖ್ಯೆ: 412 ಎಂ.ಎನ್.ವೈ./2004, ದಿನಾಂಕ:17-02-2004 ರ ರೀತ್ಯ ಪಾಲಿಕೆಯ ಸೇವೆಗೆ ವಿಲೀನಗೊಳಿಸಿರುವಂತೆ ಸದರಿಯವರನ್ನು ಸಹ ಪಾಲಿಕೆ ಸೇವೆಗೆ ವಿಲೀನಗೊಳಿಸಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಸರ್ಕಾರದ ಆದೇಶದಂತೆ, ಪಾಲಿಕೆಗೆ ಒಂದು ವರ್ಷದ ಅವಧಿಗೆ ನಿಯೋಜನೆ ಮೇಲೆ ನೇಮಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಶಿಕ್ಷಕರು ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಸಲ್ಲಿಸಿದ್ದ ಹಾಜರಾತಿ ವರದಿಯನ್ನು ಪರಿಗಣಿಸಿ ಕರ್ತವ್ಯದ ಮೇಲೆ ತೆಗೆದುಕೊಳ್ಳಲಾಗಿರುತ್ತದೆ. ನಂತರ ಸರ್ಕಾರವು ಸದರಿ ಸಹ ಶಿಕ್ಷಕರ ನಿಯೋಜನೆ ಅವಧಿಯನ್ನು ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಅಥವಾ 2 ವರ್ಷದ ಅವಧಿಗೆ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಮುಂದುವರೆಸಲು ಅನುಮತಿ ನೀಡಲಾಗಿರುತ್ತದೆ. ಇದರಂತೆ ಸದರಿ ಸಹ ಶಿಕ್ಷಕರನ್ನು ಪಾಲಿಕೆಯಲ್ಲಿ ನಿಯೋಜನಾ ಸೇವೆ ಮೇಲೆ ದಿನಾಂಕ: 05-02-2011 ರಿಂದ 2 ವರ್ಷದ ವರೆಗೆ ಅಥವಾ ಪಾಲಿಕೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬುವವರೆವಿಗೂ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಎರವಲು ಸೇವೆಯ ಮೇಲೆ ಪಾಲಿಕೆಯ ಪ್ರಾಥಮಿಕ ಶಾಲೆ ಮಾರಪ್ಪನ ಪಾಳ್ಯ ಇಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿದೆ.



ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನಂತರ ಸರ್ಕಾರದ ಪತ್ರದಲ್ಲಿ, ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣ ವಾಸಿ ಹಿಂದುಸ್ಥಾನಿ ಜನ ಮಹಾಸಭಾ ಕನ್ನಡ ಹಿಂದಿ ಪಾಠಶಾಲೆ ಇವರನ್ನು ಬಿಬಿಎಂಪಿ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿರುತ್ತಾರೆ.

ಈ ಸಂಬಂಧ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಸಲ್ಲಿಸಲಾಗಿದ್ದು, ಸಮಿತಿಯ ಸಭೆಯಲ್ಲಿ ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ಈ ಕಛೇರಿಯ ಪತ್ರದಂತೆ ಸರ್ಕಾರದ ಅವಗಾಹನೆಗೆ ತರಲಾಗಿದೆ.

ಪ್ರಸ್ತುತ ಪಾಲಿಕೆಯ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ 80 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರದ ಪತ್ರದಲ್ಲಿ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅನುಮತಿ ನೀಡಿರುವಂತೆ, ಈಗಾಗಲೇ ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ, ಸರ್ಕಾರಿ/ಅನುದಾನಿತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪಾಲಿಕೆಯ ಸೇವೆಗೆ ಎರವಲು ಸೇವೆ ಮೇಲೆ ನಿಯೋಜಿಸಲು/ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಪಾಲಿಕೆಯಲ್ಲಿ ಎರವಲು ಸೇವೆ ಮೇಲೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ 9 ಮಂದಿ ಅನುದಾನಿತ ಶಾಲೆ ಕಾಲೇಜು ಶಿಕ್ಷಕರು ಮತ್ತು ಉಪನ್ಯಾಸಕರು ಸದರಿಯವರುಗಳ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಕೋರಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 2203/2008 (ಎಸ್-ಆರ್‌ಇಎಸ್) ರಂತೆ ದಾವೆ ಸಲ್ಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಸದರಿ ರಿಟ್ ಪಿಟಿಷನ್‌ನ್ನು ದಿನಾಂಕ: 11-02-2011 ರಂದು ವಜಾಗೊಳಿಸಿರುವುದನ್ನು ಪರಿಗಣಿಸಿ, ಸದರಿ 9 ಮಂದಿ ಅನುದಾನಿತ ಶಾಲೆ ಕಾಲೇಜು ಶಿಕ್ಷಕರು ಮತ್ತು ಉಪನ್ಯಾಸಕರುಗಳನ್ನು, ಈ ಕಛೇರಿ ಆದೇಶ ದಿನಾಂಕ: 22-03-2011 ರಂತೆ ಪಾಲಿಕೆ ಸೇವೆಯಿಂದ ಬಿಡುಗಡೆ ಮಾಡಿ ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ.

ಈ ಮೇಲ್ಕಂಡ ವಿವರವಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ.ಕಲ್ಯಾಣಮ್ಮ, ಸಹ ಶಿಕ್ಷಕರು, ಮೈಸೂರು ದಕ್ಷಿಣವಾಸಿ ಹಿಂದೂಸ್ಥಾನಿ ಮಹಾಸಭಾ ಕನ್ನಡ, ಹಿಂದಿ ಪಾಠಶಾಲೆಯಿಂದ ಸರ್ಕಾರದ ಆದೇಶದಂತೆ ಪಾಲಿಕೆಯ ಪ್ರಾಥಮಿಕ ಶಾಲೆ ಮಾರಪ್ಪನಪಾಳ್ಯ ಇಲ್ಲಿ ಎರವಲು ಸೇವೆ ಮೇಲೆ ದಿನಾಂಕ: 04-02-2010 ರಿಂದ ಕಾರ್ಯನಿರ್ವಹಿಸುತ್ತಿರುವ ಇವರು ಮನವಿಯನ್ನು ಸಲ್ಲಿಸಿ ಅವರ ಪತಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕರ್ನಾಟಕ ಸಚಿವಾಲಯದ ಮುಖ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರ ಸೇವೆಯು ವರ್ಗಾವಣೆ ರಹಿತ ಸೇವೆಯಾಗಿರುವುದರಿಂದ ಪತಿ ಪತ್ನಿಯರು ಒಟ್ಟಿಗೆ ಸೇವೆ ಸಲ್ಲಿಸಬೇಕೆಂಬ ನಿಯಮದಡಿ ಇವರ ಸೇವೆಯನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪುನರ್ ಪರಿಶೀಲಿಸಲು ಕೋರಿರುವ ಸಂಬಂಧ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಜಂಟಿ ಆಯುಕ್ತರ (ಆಡಳಿತ) ದಿನಾಂಕ: 27-08-2012 ರ ಬಿ12(3) ಪಿಆರ್/175/09-10 ರ ಟಿಪ್ಪಣಿ.

**ನಿರ್ಣಯ:**

*ಪ್ರಸ್ತಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಹಾಲಿ ಪಾಲಿಕೆಯ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ 80 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಹಾಗೂ ಪಾಲಿಕೆಯ ಶಾಲಾ ಕಾಲೇಜುಗಳು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಅನುದಾನ ಸಂಹಿತೆಗೆ ಒಳಪಟ್ಟಿರುವುದರಿಂದ ಅನುದಾನ ಸಂಹಿತೆಯ ಪರಿಚ್ಛೇದ 59ರ ಪ್ರಕಾರ ಅನುದಾನಿತ ಶಾಲೆಗಳಿಂದ ಶಿಕ್ಷಕರುಗಳನ್ನು ಪಾಲಿಕೆ ಶಾಲೆಗಳಿಗೆ ವರ್ಗಾವಣೆ ಮಾಡಲು ಅವಕಾಶವಿರುವ ಹಿನ್ನೆಲೆಯ ಮೇರೆಗೆ ಈ ಹಿಂದೆ ಶ್ರೀಮತಿ ಆರ್.ಕೆ. ಇಂದಿರಮ್ಮ, ಹಿಂದಿ ಶಿಕ್ಷಕರನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಳಿಸಿಕೊಂಡಿರುವ ರೀತ್ಯಾ ಶ್ರೀಮತಿ ಕಲ್ಯಾಣಮ್ಮ, ಸಹ ಶಿಕ್ಷಕರನ್ನು ಸಹ ಪಾಲಿಕೆಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕೂಡಲೇ ವಿಲೀನಗೊಳಿಸುವುದು ಸಮಂಜಸವೆಂದು ಅಭಿಪ್ರಾಯಿಸುತ್ತ, ದಿನಾಂಕ:27-08-2012ರ ಜಂಟಿ ಆಯುಕ್ತರು(ಆಡಳಿತ)ರವರ ಟಿಪ್ಪಣಿಯನ್ನು ಒಪ್ಪಿದೆ.*

ಅಧ್ಯಕ್ಷರು
**ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 10.09.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆಯ ನಡವಳಿಗಳು**

| ಕ್ರ ಸಂ | ಅಧ್ಯಕ್ಷರು/ ಸದಸ್ಯರು | ಸಿ ಮತ್ತು ಆ.ಸು ಸ್ಥಾಯಿ ಸಮಿತಿ | ತೆ ಮತ್ತು ಆ ಸ್ಥಾಯಿ ಸಮಿತಿ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | ಅಧ್ಯಕ್ಷರು | ವಿ.ವಾಗೀಶ್ | ಮುನೀಂದ್ರಕುಮಾರ್.ಕೆ.ಎ | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಸದಸ್ಯರು | ನಾಜಿನಿ ಬೇಗಂ | ಮುನಿಸ್ವಾಮಿಗೌಡ | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಸದಸ್ಯರು | ಮೋಹನ್ ಕುಮಾರ್ | ಆನಂದ್. ವಿ | ವಿಶೇಷ ಅಧಿಕಾರಿ |
| 4 | ಸದಸ್ಯರು | ಜೆ. ಭುವನೇಶ್ವರಿ | ಕೆ. ಉಮೇಶ್‌ಶೆಟ್ಟಿ | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 5 | ಸದಸ್ಯರು | ಎಲ್.ನಾಗರತ್ನ | ಕೆ. ಪೂರ್ಣಿಮ | ಸಹಾಯಕ ನಿಯಂತ್ರಕರು(ಹಣಕಾಸು) |
| 6 | ಸದಸ್ಯರು | ರವೀಂದ್ರನ್ ಕೆ | ಗಂಗಾಂಬಿಕೆ | |
| 7 | ಸದಸ್ಯರು | ಎನ್. ಶಾಂತಕುಮಾರಿ | ಕ್ವೀನ್‌ಎಲಿಜೆಬತ್ | |
| 8 | ಸದಸ್ಯರು | ಎಸ್.ಎಂ. ಮುರುಗೇಶ್ ಮೊದಲಿಯಾರ್ | ನೂರ್ ಜಹಾನ್ | |
| 9 | ಸದಸ್ಯರು | ಅಬ್ದುಲ್ ರಖೀಬ್ ಝುಕೀರ್ | ಟಿ.ಎ. ಗಾಯಿತ್ರಿ | |
| 10 | ಸದಸ್ಯರು | ರಾಜಣ್ಣ | ತೇಜಸ್ವಿನಿ ಎನ್.ರಾಜು | |
| 11 | ಸದಸ್ಯರು | | ಸುರೇಶ್. ಹೆಚ್ | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ:17.01.2007ರಂದು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/141/ಎಂಎಲ್‌ಆರ್/2006ರಂತೆ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದಕ್ಕಿಂತ ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣ 226 ಚ.ಕಿ.ಮೀ ಗಳಾಗಿದ್ದು, ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ. ವಿಸ್ತರಣಗೊಂಡಿದ್ದು, ಜನಸಂಖ್ಯೆಯು ಸುಮಾರು 80 ಲಕ್ಷ ಇರಬಹುದಾಗಿ ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಕಾರ್ಯಕ್ಷೇತ್ರ ವಿಸ್ತರಣಗೊಂಡಿದ್ದು, ಇದಕ್ಕೆ ಅನುಗುಣವಾಗಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಕಾರಣ ಸಾಮಾನ್ಯ ಆಡಳಿತ, ಕಂದಾಯ, ಕಾಮಗಾರಿ, ಆರೋಗ್ಯ, ತೋಟಗಾರಿಕೆ, ನಗರ ಯೋಜನೆ, ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಅರಣ್ಯ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸದ ಒತ್ತಡ/ಪ್ರಮಾಣ ಹೆಚ್ಚಾಗಿದ್ದು, ಅಗತ್ಯ

ಅಧ್ಯಕ್ಷರು ಅಧ್ಯಕ್ಷರು

ಮೂಲಭೂತ ಸೌಕರ್ಯಗಳನ್ನು ಬೆಂಗಳೂರಿನ ಜನತೆಗೆ ಕಲ್ಪಿಸಲು ಮೇಲ್ಕಂಡ ಎಲ್ಲಾ ಪಾಲಿಕೆಯ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಬೇಕಾದ ಅನಿವಾರ್ಯತೆ ಇರುತ್ತದೆ. ಗುಣಮಟ್ಟದ ಮಾನವ ಸಂಪನ್ಮೂಲವಿಲ್ಲದೆ ಅಂತರ್ ರಾಷ್ಟ್ರೀಯ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸುವುದು/ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.

ಕಳೆದ 40 ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅತಿ ಮುಖ್ಯವಾಗಿ ಆಡಳಿತ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿರುತ್ತದೆ, ಹೊಸ ಸವಾಲುಗಳು ಎದುರಾಗಿರುತ್ತವೆ, ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು, ಸವಾಲುಗಳಿಗೆ ಸರಿಯಾದ ಉತ್ತರಗಳನ್ನು ಕೊಡುವ ಪಾರದರ್ಶಕ ಮತ್ತು ಉತ್ತರದಾಯಿತ್ವಯುಳ್ಳ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುಂಚೆ (ಅಂದರೆ, ದಿನಾಂಕ: 17-01-2007ಕ್ಕಿಂತ ಮುಂಚೆ) ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಸಂಖ್ಯೆ:6,60,000-00 ಆಸ್ತಿಗಳಿದ್ದವು. ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತಮುತ್ತಲಿನ 110 ಗ್ರಾಮಗಳು, 7 ನಗರ ಸಭೆ ಮತ್ತು 1 ಪುರಸಭೆ ಪ್ರದೇಶಗಳನ್ನು ಒಳಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಒಟ್ಟು 15,00,000-00 ಆಸ್ತಿಗಳು ಇರುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ 650-00ಕೋಟಿಗಳಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.1,100ಕೋಟಿಗಳಷ್ಟು ಆಗಿರುತ್ತದೆ.

ದಿನಾಂಕ:17-01-2007ಕ್ಕಿಂತ ಮುಂಚೆ ಪಾಲಿಕೆ ವ್ಯಾಪ್ತಿಯಲ್ಲಿ 390 ಸಂಖ್ಯೆಯಷ್ಟು ಉದ್ಯಾನವನಗಳು ಇದ್ದವು, ಪ್ರಸ್ತುತ 673 ಸಂಖ್ಯೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನೂ 262 ಜಾಗಗಳಲ್ಲಿ ಸಮಗ್ರವಾಗಿ ಉದ್ಯಾನವನಗಳ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೆಟ್ರೋ ಯೋಜನೆಯನ್ನು ರೂ.6395ಕೋಟಿ ವೆಚ್ಚ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಂತರಾಷ್ಟ್ರಿಯ ವಿಮಾನ ನಿಲ್ದಾಣ ಕೂಡ ಈಗಾಗಲೇ ಅಭಿವೃದ್ಧಿ ಪಡಿಸಿದ್ದು, ಕಾರ್ಯಗತಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ 2084 ಸಂಖ್ಯೆಯಷ್ಟು ಐ.ಟಿ/ಬಿ.ಟಿ ಕಂಪನಿಗಳಿರುತ್ತವೆ. ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹೊಸ ಹುದ್ದೆಗಳ ಹಾಗೂ ಕೆಲವು ಅಗತ್ಯ ಹುದ್ದೆಗಳನ್ನು ಅಧಿಕವಾಗಿ ಸೃಷ್ಠಿಯಾಗಬೇಕಾಗಿರುತ್ತದೆ.

ಶ್ರೀಮತಿ ಹರಿಣಿ ವನಜ ಕುಮಾರಿ, ನಿವೃತ್ತ ಕೆ.ಎ.ಎಸ್ ರವರನ್ನು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಪಾಲಿಕೆಯಿಂದ ನೇಮಕಮಾಡಿಕೊಳ್ಳಲಾಗಿದೆ. ಸದರಿಯವರು ವಿವಿಧ ಇಲಾಖೆಗಳ ಹುದ್ದೆಗಳ ಕಾರ್ಯವೈಖರಿ ಬಗ್ಗೆ ಅಧ್ಯಯನ ನಡೆಸಿ, ಇಲಾಖಾ



ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಮುಖ್ಯಸ್ಥರೊಂದಿಗೆ ಚರ್ಚಿಸಿ, ಆಡಳಿತ ಇಲಾಖಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರು ನಡೆಸಿದ ಸಭೆಯ ನಡವಳಿಕೆಗಳ ಸೂಚನೆ ಅನುಸರಿಸಿ ಎಲ್ಲಾ ಹುದ್ದೆಗಳ ಕಾರ್ಯವೈಖರಿಯ ಪುನರಾವಲೋಕನೆ ಮಾಡಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಕರಡನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಷ್ಕರಣಾ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಕೆಲವೊಂದು ತಿದ್ದುಪಡಿಯೊಂದಿಗೆ ಸದರಿ ಕರಡನ್ನು ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನಡವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಯ ಹಿನ್ನಲೆಯಲ್ಲಿ ಅವಶ್ಯವಿಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು ಕೂಡ ಪ್ರಸ್ತಾಪಿಸಲಾಗಿದೆ. ಅತ್ಯಾವಶ್ಯಕವಾಗಿ ಬೇಕಾಗಿರುವ ಹುದ್ದೆಗಳನ್ನು ಸೃಜಿಸಲು/ ಹೆಚ್ಚುವರಿಗೊಳಿಸಲು ಅಥವಾ ಕಡಿಮೆ ದರ್ಜೆಗೊಳಿಸಲೂ ಸಹ ಪ್ರಸ್ತಾಪಿಸಲಾಗಿದೆ.

ಈ ಹೊಸ ಹುದ್ದೆಗಳನ್ನು ಸೃಜಿಸಿರುವುದರಿಂದ ಆಗುವ ಆರ್ಥಿಕ ಹೊರೆಯನ್ನು ಕೂಡ ಪರಿಗಣಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಕೆಲವು ಶ್ರೇಣಿಯ ಹುದ್ದೆಗಳು ಇಲ್ಲದೆ ಇದ್ದರೂ ಕೂಡ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆಗೆದುಕೊಂಡು ಮಹಾನಗರ ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಈಗ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಸೃಜಿಸಲು ಕಾನೂನಿನಲ್ಲಿ ಯಾವುದೇ ತೊಡಕು ಬಾರದಂತೆ ಕ್ರಮವಹಿಸಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಲ್ಲಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಲಗತ್ತು ನಿಗಧಿತ ನಮೂನೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11-07-2012ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಟಿಪ್ಪಣಿ.

<u>**ನಿರ್ಣಯ:**</u>

ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ ಮತ್ತು ವಲಯಗಳ ಪ್ರತಿಯೊಂದು ಇಲಾಖೆಯಲ್ಲಿರುವ ಸಿಬ್ಬಂದಿಗಳ ಬಗ್ಗೆ ವಿಶೇಷಾಧಿಕಾರಿಗಳು(ವೃಂದಾ ಮತ್ತು ನೇಮಕಾತಿ ನಿಯಮಾವಳಿ)ರವರು ಸಂಕ್ಷಿಪ್ತವಾಗಿ ವಿವರಿಸಿದರು. ಮುಖ್ಯವಾಗಿ ಯಾವ ಇಲಾಖೆಗಳಲ್ಲಿ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆಯೋ ಆ ಇಲಾಖೆಯಲ್ಲಿ ಸಿಬ್ಬಂದಿಗಳನ್ನು ಸೃಜಿಸಲು ಹಾಗೂ ಯಾವ ಇಲಾಖೆಗಳಲ್ಲಿ



ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು

ಅನವಶ್ಯಕ ಹುದ್ದೆಗಳಿರುತ್ತವೆಯೋ ಅಂತಹ ಹುದ್ದೆಗಳನ್ನು ರದ್ದುಪಡಿಸಿ, ಆ ಹುದ್ದೆಗಳನ್ನು ಅವಶ್ಯಕತೆ ಇದ್ದಲ್ಲಿ ಉಪಯೋಗಿಸಿಕೊಳ್ಳುವುದು ಹಾಗೂ ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 100 ವಾರ್ಡ್‌ಗಳು ಇದ್ದು, ಪ್ರಸ್ತುತ ಸದರಿ ವಾರ್ಡ್‌ಗಳ ಸಂಖ್ಯೆಯು 198 ಆಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರಚನೆಯಾಗಿದ್ದು, ಇದಕ್ಕನುಗುಣವಾಗಿ ಅವಶ್ಯಕ ಹುದ್ದೆಗಳನ್ನು ಪಾಲಿಕೆಗೆ ಆರ್ಥಿಕ ಹೊರೆಯಾಗದಂತೆ ಸೃಜಿಸಿಕೊಂಡು ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು. ಈ ಬಗ್ಗೆ ಇನ್ನು ಗಹನವಾಗಿ ಇಲಾಖಾವಾರು ಚರ್ಚಿಸಬೇಕಾಗಿರುವುದರಿಂದ ಈ ಸಭೆಯನ್ನು ದಿನಾಂಕ:11.09.2012ಕ್ಕೆ ಮುಂದೂಡಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/18/2012-13**

**ನಿರ್ಣಯ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಲವು ಹೊಸ ಹುದ್ದೆಗಳನ್ನು/ ಅಗತ್ಯ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಹಾಗೂ ಕೆಲವು ಹುದ್ದೆಗಳನ್ನು ರದ್ದು ಪಡಿಸುವ ಸಂಬಂಧ ಕರಡು ಪರಿಷ್ಕೃತ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತೆ, ಈ ಹಿಂದೆ ನಿವೃತ್ತ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳಾದ ಶ್ರೀಮತಿ ಹರಿಣಿ ವನಜಾ ಕುಮಾರಿರವರನ್ನು ಒಂದು ವರ್ಷದ ಅವಧಿಗೆ ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದು, ಸದರಿ ಅವಧಿಯು ದಿನಾಂಕ:16.09.2012ಕ್ಕೆ ಪೂರ್ಣಗೊಳ್ಳಲಿದ್ದು, ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ರಚನೆ ಕುರಿತಂತಹ ಕಾರ್ಯವು ಇನ್ನೂ ಪ್ರಗತಿಯ ಹಂತದಲ್ಲಿದ್ದು ಮೇಲ್ಕಂಡ ನಿವೃತ್ತ ಅಧಿಕಾರಿಗಳ ಸೇವೆಯು ಅತ್ಯವಶ್ಯಕವಾಗಿರುವ ಹಿನ್ನೆಲೆಯಲ್ಲಿ ಇವರ ಸೇವೆಯನ್ನು ಮತ್ತೊಂದು ವರ್ಷದ ಅವಧಿಗೆ ಹಿಂದಿನಂತೆ ವಿಧಿಸಿರುವ ಷರತ್ತಿಗೊಳಪಡಿಸಿ ಮುಂದುವರೆಸಲು ಆಯುಕ್ತರನ್ನು ಕೋರಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

| | |
|---|---|
| (ಸಹಿ) | (ಸಹಿ) |
| **ಅಧ್ಯಕ್ಷರು** | **ಅಧ್ಯಕ್ಷರು** |
| **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ** | **ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ** |
| **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.** | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.** |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 11.09.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಜಂಟಿ ಸಭೆಯು ಮುಂದೂಡಿದ ಸಭೆಯ ನಡವಳಿಗಳು

| ಕ್ರ ಸಂ | ಅಧ್ಯಕ್ಷರು/ ಸದಸ್ಯರು | ಸಿ ಮತ್ತು ಆ.ಸು ಸ್ಥಾಯಿ ಸಮಿತಿ | ತೆ ಮತ್ತು ಆ ಸ್ಥಾಯಿ ಸಮಿತಿ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | ಅಧ್ಯಕ್ಷರು | ವಿ.ವಾಗೀಶ್ | ಮುನೀಂದ್ರಕುಮಾರ್.ಕೆ.ಎ | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಸದಸ್ಯರು | ನಾಜಿನಿ ಬೇಗಂ | ಮುನಿಸ್ವಾಮಿಗೌಡ | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 3 | ಸದಸ್ಯರು | ಮೋಹನ್ ಕುಮಾರ್ | ಆನಂದ್. ವಿ | ವಿಶೇಷ ಅಧಿಕಾರಿ |
| 4 | ಸದಸ್ಯರು | ಜೆ. ಭುವನೇಶ್ವರಿ | ಕೆ. ಉಮೇಶ್‌ಶೆಟ್ಟಿ | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 5 | ಸದಸ್ಯರು | ಎಲ್.ನಾಗರತ್ನ | ಕೆ. ಪೂರ್ಣಿಮ | |
| 6 | ಸದಸ್ಯರು | ರವೀಂದ್ರನ್ ಕೆ | ಗಂಗಾಂಬಿಕೆ | |
| 7 | ಸದಸ್ಯರು | ಎನ್. ಶಾಂತಕುಮಾರಿ | ಕ್ವೀನ್‌ಎಲಿಜೆಬೆತ್ | |
| 8 | ಸದಸ್ಯರು | ಎಸ್.ಎಂ. ಮುರುಗೇಶ್ ಮೊದಲಿಯಾರ್ | ನೂರ್ ಜಹಾನ್ | |
| 9 | ಸದಸ್ಯರು | ಅಬ್ದುಲ್ ರಖೀಬ್ ಝುಕೀರ್ | ಟಿ.ಎ. ಗಾಯಿತ್ರಿ | |
| 10 | ಸದಸ್ಯರು | ರಾಜಣ್ಣ | ತೇಜಸ್ವಿನಿ ಎನ್.ರಾಜು | |
| 11 | ಸದಸ್ಯರು | | ಸುರೇಶ್. ಹೆಚ್ | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ:17.01.2007ರಂದು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/141/ಎಂಎಲ್‌ಆರ್/2006ರಂತೆ ಅಸ್ತಿತ್ವಕ್ಕೆ ಬಂದಿರುತ್ತದೆ. ಇದಕ್ಕಿಂತ ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯ ವಿಸ್ತೀರ್ಣ 226 ಚ.ಕಿ.ಮೀ ಗಳಾಗಿದ್ದು, ಸುಮಾರು 45 ಲಕ್ಷ ಜನಸಂಖ್ಯೆ ಹೊಂದಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ. ವಿಸ್ತರಣಗೊಂಡಿದ್ದು, ಜನಸಂಖ್ಯೆಯು ಸುಮಾರು 80 ಲಕ್ಷ ಇರಬಹುದಾಗಿ ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಕಾರ್ಯಕ್ಷೇತ್ರ ವಿಸ್ತರಣಗೊಂಡಿದ್ದು, ಇದಕ್ಕೆ ಅನುಗುಣವಾಗಿ ಅಗತ್ಯ ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸಬೇಕಾದ ಕಾರಣ ಸಾಮಾನ್ಯ ಆಡಳಿತ, ಕಂದಾಯ, ಕಾಮಗಾರಿ, ಆರೋಗ್ಯ, ತೋಟಗಾರಿಕೆ, ನಗರ ಯೋಜನೆ, ಸಾಂಖ್ಯಿಕ, ಮಾಹಿತಿ

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ತಂತ್ರಜ್ಞಾನ, ಅರಣ್ಯ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸದ ಒತ್ತಡ/ಪ್ರಮಾಣ ಹೆಚ್ಚಾಗಿದ್ದು, ಅಗತ್ಯ ಮೂಲಭೂತ ಸೌಕರ್ಯಗಳನ್ನು ಬೆಂಗಳೂರಿನ ಜನತೆಗೆ ಕಲ್ಪಿಸಲು ಮೇಲ್ಕಂಡ ಎಲ್ಲಾ ಪಾಲಿಕೆಯ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಬೇಕಾದ ಅನಿವಾರ್ಯತೆ ಇರುತ್ತದೆ. ಗುಣಮಟ್ಟದ ಮಾನವ ಸಂಪನ್ಮೂಲವಿಲ್ಲದೆ ಅಂತರ್ ರಾಷ್ಟ್ರೀಯ ಗುಣಮಟ್ಟದಲ್ಲಿ ಸೇವೆಗಳನ್ನು ಒದಗಿಸುವುದು/ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.

ಕಳೆದ 40 ವರ್ಷಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅತಿ ಮುಖ್ಯವಾಗಿ ಆಡಳಿತ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿರುತ್ತದೆ, ಹೊಸ ಸವಾಲುಗಳು ಎದುರಾಗಿರುತ್ತವೆ, ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು, ಸವಾಲುಗಳಿಗೆ ಸರಿಯಾದ ಉತ್ತರಗಳನ್ನು ಕೊಡುವ ಪಾರದರ್ಶಕ ಮತ್ತು ಉತ್ತರದಾಯಿತ್ವಯುಳ್ಳ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅಸ್ತಿತ್ವಕ್ಕೆ ಬರುವ ಮುಂಚೆ (ಅಂದರೆ, ದಿನಾಂಕ: 17–01–2007ಕ್ಕಿಂತ ಮುಂಚೆ) ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಸಂಖ್ಯೆ:6,60,000–00 ಆಸ್ತಿಗಳಿದ್ದವು. ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತಮುತ್ತಲಿನ 110 ಗ್ರಾಮಗಳು, 7 ನಗರ ಸಭೆ ಮತ್ತು 1 ಪುರಸಭೆ ಪ್ರದೇಶಗಳನ್ನು ಒಳಗೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ಒಟ್ಟು 15,00,000–00 ಆಸ್ತಿಗಳು ಇರುತ್ತವೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ 650–00ಕೋಟಿಗಳಾಗಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯ ರೂ.1,100ಕೋಟಿಗಳಷ್ಟು ಆಗಿರುತ್ತದೆ.

ದಿನಾಂಕ:17–01–2007ಕ್ಕಿಂತ ಮುಂಚೆ ಪಾಲಿಕೆ ವ್ಯಾಪ್ತಿಯಲ್ಲಿ 390 ಸಂಖ್ಯೆಯಷ್ಟು ಉದ್ಯಾನವನಗಳು ಇದ್ದವು, ಪ್ರಸ್ತುತ 673 ಸಂಖ್ಯೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನೂ 262 ಜಾಗಗಳಲ್ಲಿ ಸಮಗ್ರವಾಗಿ ಉದ್ಯಾನವನಗಳ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೆಟ್ರೋ ಯೋಜನೆಯನ್ನು ರೂ.6395ಕೋಟಿ ವೆಚ್ಚ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಂತರಾಷ್ಟ್ರಿಯ ವಿಮಾನ ನಿಲ್ದಾಣ ಕೂಡ ಈಗಾಗಲೇ ಅಭಿವೃದ್ಧಿ ಪಡಿಸಿದ್ದು, ಕಾರ್ಯಗತಗೊಂಡಿದೆ. ಪ್ರಸ್ತುತ ಬೆಂಗಳೂರಿನಲ್ಲಿ 2084 ಸಂಖ್ಯೆಯಷ್ಟು ಐ.ಟಿ/ಬಿ.ಟಿ ಕಂಪನಿಗಳಿರುತ್ತವೆ. ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಲ್ಲಿ ಹೊಸ ಹುದ್ದೆಗಳ ಹಾಗೂ ಕೆಲವು ಅಗತ್ಯ ಹುದ್ದೆಗಳನ್ನು ಅಧಿಕವಾಗಿ ಸೃಷ್ಟಿಯಾಗಬೇಕಾಗಿರುತ್ತದೆ.

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಶ್ರೀಮತಿ ಹರಿಣಿ ವನಜ ಕುಮಾರಿ, ನಿವೃತ್ತ ಕೆ.ಎ.ಎಸ್ ರವರನ್ನು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಪಾಲಿಕೆಯಿಂದ ನೇಮಕಮಾಡಿಕೊಳ್ಳಲಾಗಿದೆ. ಸದರಿಯವರು ವಿವಿಧ ಇಲಾಖೆಗಳ ಹುದ್ದೆಗಳ ಕಾರ್ಯವೈಖರಿ ಬಗ್ಗೆ ಅಧ್ಯಯನ ನಡೆಸಿ, ಇಲಾಖಾ ಮುಖ್ಯಸ್ಥರೊಂದಿಗೆ ಚರ್ಚಿಸಿ, ಆಡಳಿತ ಇಲಾಖಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರು ನಡೆಸಿದ ಸಭೆಯ ನಡವಳಿಕೆಗಳ ಸೂಚನೆ ಅನುಸರಿಸಿ ಎಲ್ಲಾ ಹುದ್ದೆಗಳ ಕಾರ್ಯವೈಖರಿಯ ಪುನರಾವಲೋಕನೆ ಮಾಡಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಕರಡನ್ನು ಈ ಉದ್ದೇಶಕ್ಕಾಗಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಷ್ಕರಣಾ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು, ಕೆಲವೊಂದು ತಿದ್ದುಪಡಿಯೊಂದಿಗೆ ಸದರಿ ಕರಡನ್ನು ಅನುಮೋದನೆಗಾಗಿ ಮುಂದಿನ ಕ್ರಮಕ್ಕಾಗಿ ನಡವಳಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಯ ಹಿನ್ನಲೆಯಲ್ಲಿ ಅವಶ್ಯವಿಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು ಕೂಡ ಪ್ರಸ್ತಾಪಿಸಲಾಗಿದೆ. ಅತ್ಯಾವಶ್ಯಕವಾಗಿ ಬೇಕಾಗಿರುವ ಹುದ್ದೆಗಳನ್ನು ಸೃಜಿಸಲು/ ಹೆಚ್ಚುವರಿಗೊಳಿಸಲು ಅಥವಾ ಕಡಿಮೆ ದರ್ಜೆಗೊಳಿಸಲೂ ಸಹ ಪ್ರಸ್ತಾಪಿಸಲಾಗಿದೆ.

ಈ ಹೊಸ ಹುದ್ದೆಗಳನ್ನು ಸೃಜಿಸಿರುವುದರಿಂದ ಆಗುವ ಆರ್ಥಿಕ ಹೊರೆಯನ್ನು ಕೂಡ ಪರಿಗಣಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಕೆಲವು ಶ್ರೇಣಿಯ ಹುದ್ದೆಗಳು ಇಲ್ಲದೆ ಇದ್ದರೂ ಕೂಡ ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ತೆಗೆದುಕೊಂಡು ಮಹಾನಗರ ಪಾಲಿಕೆಯ ಆಡಳಿತ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಈಗ ಪ್ರಸ್ತಾಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಡಿಯಲ್ಲಿ ಈ ಎಲ್ಲಾ ಹುದ್ದೆಗಳನ್ನು ಸೃಜಿಸಲು ಕಾನೂನಿನಲ್ಲಿ ಯಾವುದೇ ತೊಡಕು ಬಾರದಂತೆ ಕ್ರಮವಹಿಸಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಲ್ಲಿಸಿರುವ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಲಗತ್ತು ನಿಗಧಿತ ನಮೂನೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11-07-2012ರ ಸಂಖ್ಯೆ: ಬಿಬಿಎಂಪಿ(ಸಿ&ಆರ್)/ಪಿಆರ್/01/2007-08ರ ಟಿಪ್ಪಣಿ.

**<u>ನಿರ್ಣಯ:</u>**

ದಿನಾಂಕ:10.09.2012ರಂದು ಚರ್ಚಿಸಿದಂತೆ ಪ್ರತಿಯೊಂದು ಇಲಾಖೆಯ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಗೆ ವಿವರಿಸುವಂತೆ ವಿಶೇಷಾಧಿಕಾರಿಗಳು (ವೃಂದಾ ಮತ್ತು ನೇಮಕಾತಿ)ರವರಿಗೆ ಸೂಚಿಸಿದ್ದು, ಸದರಿಯವರು ಪ್ರತಿಯೊಂದು ಇಲಾಖೆಯಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಹಾಗೂ ಖಾಲಿ ಇರುವ ಹುದ್ದೆಗಳ ವಿವರವನ್ನು ಸವಿವರವಾಗಿ ವಿವರಿಸಿದ್ದು, ಈ

ಅಧ್ಯಕ್ಷರು
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪೈಕಿ ಹಾಲಿ ಕಾಮಗಾರಿ ಇಲಾಖೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಮಂಜೂರಾತಿ ಹುದ್ದೆಗಿಂತ ಅಧಿಕ ಪ್ರಮಾಣದಲ್ಲಿರುವುದಾಗಿಯೂ, ಅದೇ ರೀತಿ ಅರಣ್ಯ ವಿಭಾಗ, ಪಶುಸಂಗೋಪನೆ ವಿಭಾಗ ಈ ಇಲಾಖೆಗಳಲ್ಲಿ ಅನವಶ್ಯಕವಾಗಿ ಇರುವ ಹುದ್ದೆಗಳನ್ನು ಮುಂದುವರೆಸುವ ಕುರಿತಂತೆ ಸಮಿತಿಯ ಅಭಿಪ್ರಾಯವನ್ನು ಕೋರಿದ್ದು, ಈ ಸಂಬಂಧ ಜಂಟಿ ಸಮಿತಿಯು ಈ ಬಗ್ಗೆ ಚರ್ಚಿಸಿ ಅನವಶ್ಯಕ ಹುದ್ದೆಗಳನ್ನು ತೆಗೆದುಹಾಕಿದ ಪಕ್ಷದಲ್ಲಿ ಆರ್ಥಿಕವಾಗಿ ತೊಂದರೆ ಉಂಟಾಗುವುದಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ. ಇದೇ ರೀತಿ ಮುಖ್ಯ ಕಛೇರಿಯಲ್ಲಿರುವ ಜಂಟಿ ನಿರ್ದೇಶಕರು(ನಗರ ಯೋಜನೆ) ಕಛೇರಿಯಲ್ಲಿಯೂ ಸಹ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳನ್ನು ಸಹ ರದ್ದು ಪಡಿಸುವುದು ಸೂಕ್ತವೆಂದು ಜಂಟಿ ಸಮಿತಿಯು ಅಭಿಪ್ರಾಯಿಸಿರುತ್ತದೆ. ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲಾ ಇಲಾಖೆಗಳಲ್ಲಿಯೂ ಹೆಚ್ಚುವರಿಯಾಗಿರುವ ಹುದ್ದೆಗಳನ್ನು ಮೊಟಕುಗೊಳಿಸಿ, ಖಾಲಿ ಇರುವ ಹುದ್ದೆಗಳ ಪೈಕಿ ಅವಶ್ಯಕತೆ ಕಂಡು ಬಂದ ಪಕ್ಷದಲ್ಲಿ ಮಾತ್ರ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಸದರಿ ಸ್ಥಳಗಳಿಗೆ ಸ್ಥಳಾಂತರಿಸಿದ ಪಕ್ಷದಲ್ಲಿ ಆರ್ಥಿಕವಾಗಿಯೂ ಸಹ ಪಾಲಿಕೆಗೆ ಉಳಿತಾಯವಾಗುವುದರಿಂದ ಈ ಬಗೆಗೂ ಸಹ ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದು ಸಮಂಜಸವೆಂದು ಜಂಟಿ ಸಮಿತಿಯು ಅಭಿಪ್ರಾಯಿಸುತ್ತದೆ. ಪ್ರಸ್ತುತ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಂತಿಮಗೊಳಿಸುವ ಮುಂಚಿತವಾಗಿ ಹಾಲಿ ಪಾಲಿಕೆಯಲ್ಲಿ ಅಸ್ತಿತ್ವದಲ್ಲಿರುವ ಚುನಾಯಿತ ಸಂಘದ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಅವರ ಅಭಿಪ್ರಾಯವನ್ನು ಪಡೆದು ನಂತರ ಅಂತಿಮಗೊಳಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಈ ಸಭೆಯನ್ನು ದಿನಾಂಕ:12.09.2012ಕ್ಕೆ ಮುಂದೂಡಿದೆ.

| | |
|---|---|
| ಅಧ್ಯಕ್ಷರು | ಅಧ್ಯಕ್ಷರು |
| ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 12.09.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ಕುರಿತಂತೆ ಪಾಲಿಕೆಯ ಚುನಾಯಿತ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ನಡವಳಿಗಳು**

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ನಾಜಿನಿ ಬೇಗಂ | ಸದಸ್ಯರು | ವಿಶೇಷ ಅಧಿಕಾರಿ |
| 3 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 4 | ಜೆ. ಭುವನೇಶ್ವರಿ | ಸದಸ್ಯರು | **ಹಾಜರಿದ್ದ ಸಂಘದ ಪದಾಧಿಕಾರಿಗಳು** |
| 5 | ಎಲ್.ನಾಗರತ್ನ | ಸದಸ್ಯರು | ಶ್ರೀ. ಸುಬ್ರಮಣ್ಯಂ, ಅಧ್ಯಕ್ಷರು |
| 6 | ರವೀಂದ್ರನ್ ಕೆ | ಸದಸ್ಯರು | ಶ್ರೀ. ಕೆ.ಟಿ. ನಾಗರಾಜು, ಉಪಾಧ್ಯಕ್ಷರು |
| 7 | ಎನ್. ಶಾಂತಕುಮಾರಿ | ಸದಸ್ಯರು | ಶ್ರೀ. ಪಿ. ದಯಾನಂದ್, ಕಾರ್ಯದರ್ಶಿಗಳು |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | ಶ್ರೀ. ಹೆಚ್.ವಿ. ಅಶ್ವಥ್. ಖಜಾಂಚಿ |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | ಶ್ರೀ. ಬಾಬು, ಜಂಟಿ ಕಾರ್ಯದರ್ಶಿ |
| 10 | ರಾಜಣ್ಣ | ಸದಸ್ಯರು | ಶ್ರೀ. ಚ. ನಾಗರಾಜು, ಸಂಚಾಲಕರು |
| | | | ಶ್ರೀಮತಿ. ಮಂಜುಳ ಬಿ.ಡಿ. ನಿರ್ದೇಶಕರು |
| | | | ಶ್ರೀ. ಹೆಚ್.ಎನ್. ಬಸವರಾಜು, ನಿರ್ದೇಶಕರು |
| | | | ಶ್ರೀ. ರುದ್ರೇಶ್, ನಿರ್ದೇಶಕರು |
| | | | ಶ್ರೀ. ಜಿ.ಎನ್. ಆನಂದ್, ನಿರ್ದೇಶಕರು |
| | | | ಶ್ರೀ. ಮಾಯಣ್ಣ, ನಿರ್ದೇಶಕರು |

ಪ್ರಥಮವಾಗಿ ವಿಶೇಷ ಅಧಿಕಾರಿಗಳು(ವೃಂದಾ ಮತ್ತು ನೇಮಕಾತಿ ನಿಯಮಾವಳಿ)ರವರು ಸಭೆಯಲ್ಲಿ ಉಪಸ್ಥಿತರಿದ್ದಂತಹ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಹಾಗೂ ಚುನಾಯಿತ ಸಂಘದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, 1971ರಲ್ಲಿದ್ದಂತಹ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ಪುನರ್ ರಚನೆ ಕುರಿತಂತೆ ಸಭೆಗೆ ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಸವಿವರವಾಗಿ ವಿವರಣೆ ನೀಡಿರುತ್ತಾರೆ. ಸಂಘದ ಅಧ್ಯಕ್ಷರಾದಂತಹ ಶ್ರೀ. ಆರ್. ಸುಬ್ರಮಣ್ಯಂ ರವರು 1971ರಲ್ಲಿದ್ದಂತಹ ಪಾಲಿಕೆಯ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪುನರ್ ರಚಿಸಲು ತೀರ್ಮಾನ ಕೈಗೊಂಡಂತಹ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ನಿಕಟ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪೂರ್ವ ಅಧ್ಯಕ್ಷರು ಹಾಗೂ ಹಾಲಿ ಅಧ್ಯಕ್ಷರವರು ಕೈಗೊಂಡಂತಹ ಕಾರ್ಯವೈಖರಿ ಕುರಿತಂತೆ ಹೃತ್ಪೂರ್ವಕವಾಗಿ ಅಭಿನಂದನೆ ತಿಳಿಸುತ್ತಾ, ಪ್ರಸ್ತುತ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ವಿಶೇಷ ಅಧಿಕಾರಿರವರು ವಿವರಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಇರುವ ನಿಯಮದಂತೆ ನಿಯೋಜನೆ ಮೇರೆಗೆ ಅಧಿಕಾರಿಗಳನ್ನು ನೇಮಿಸುವುದರಿಂದ, ಸದರಿಯವರುಗಳ ವಿರುದ್ಧ ಒಂದು ಪಕ್ಷ ಅವರುಗಳು ಕರ್ತವ್ಯ ಲೋಪವೆಸಗಿದ್ದಲ್ಲಿ ಅವರುಗಳ ಮೇಲೆ ಪಾಲಿಕೆಯು ಯಾವುದೇ ವಿಧವಾದ ಶಿಸ್ತಿನ ಕ್ರಮ ಕೈಗೊಳ್ಳುವುದು ಸಾಧ್ಯವಿಲ್ಲದೇ ಇರುವುದರಿಂದ ಹಾಗೂ ಪಾಲಿಕೆಯಲ್ಲಿರುವ ಸಿಬ್ಬಂದಿಗಳು ಸೇವಾ ನಿಯಮಗಳ ಬಗ್ಗೆ ಹಾಗೂ ಪಾಲಿಕೆಯ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಪರಿಣತಿಯನ್ನು ಹೊಂದಿರುವುದರಿಂದ ಹಾಗೂ ಒಂದು ಪಕ್ಷ ಸದರಿಯವರುಗಳಿಂದ ಲೋಪದೋಷಗಳು ಉಂಟಾದ ಪಕ್ಷದಲ್ಲಿ ಅವರುಗಳ ಮೇಲೆ ಅಗತ್ಯ ಶಿಸ್ತಿನ ಕ್ರಮ ಕೈಗೊಳ್ಳಲು ಸಾಧ್ಯವಿರುವುದರಿಂದ, ಪೂರ್ಣ ಪ್ರಮಾಣದಲ್ಲಿ ಪಾಲಿಕೆಯ ಸಿಬ್ಬಂದಿ ವರ್ಗದವರಿಂದಲೇ ಮುಂಬಡ್ತಿ ಮೂಲಕ ಹುದ್ದೆಗಳನ್ನು ತುಂಬಿದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಪಡೆಯುವಲ್ಲಿ ಸಫಲರಾಗಬಹುದೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಈ ಮೇರೆಗೆ ತಾವುಗಳು ಆದಷ್ಟು ಕಡಿಮೆ ಸಂಖ್ಯೆಯಲ್ಲಿ ಎರವಲು ಸೇವೆಯ ಮೇಲಿನ ಸಿಬ್ಬಂದಿಗಳ ನಿಯೋಜನೆಯನ್ನು ಕಡಿತಗೊಳಿಸಿದಲ್ಲಿ ಪಾಲಿಕೆಯ ನೌಕರರುಗಳಿಂದ ಇನ್ನೂ ಉತ್ತಮ ವಿಧವಾದ ರೀತಿಯಲ್ಲಿ ಗುಣಮಟ್ಟದ ಕೆಲಸ ಕಾರ್ಯವನ್ನು ಪಡೆಯಬಹುದಾಗಿರುತ್ತದೆ ಎಂದೂ ಸಹ ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುವುದಾಗಿ ಹೇಳುತ್ತಾ, ಆದಷ್ಟು ಪಾಲಿಕೆಗೆ ಎರವಲು ಸೇವೆಯ ಸಿಬ್ಬಂದಿಗಳ ನಿಯೋಜನೆಯನ್ನು ನಿಯಂತ್ರಣ ತರುವುದು ಸೂಕ್ತವೆಂದು ತಿಳಿಸಿರುತ್ತಾರೆ. ಮುಂದುವರೆದಂತೆ ಪಾಲಿಕೆಯಲ್ಲಿ ಪಶುಸಂಗೋಪನೆ ಇಲಾಖೆ ಹಾಗೂ ಅರಣ್ಯ ಇಲಾಖೆಯೂ ಸಹ ಅವಶ್ಯವಿಲ್ಲದೇ ಇದ್ದು ಈ ಇಲಾಖೆಗಳಲ್ಲಿ ಕಿರಿಯ ವರ್ಗದ ಸಿಬ್ಬಂದಿ ವರ್ಗದವರಿಗಿಂತ ಹಿರಿಯ ವರ್ಗದ ಅಧಿಕಾರಿಗಳೇ ಹೆಚ್ಚುವರಿಯಾಗಿದ್ದು, ಈ ಇಲಾಖೆಗಳಿಂದ ಪಾಲಿಕೆಗೆ ಯಾವುದೇ ವಿಧವಾದ ಹೆಚ್ಚುವರಿ ಉಪಯೋಗವಿಲ್ಲದೇ ಇರುವುದರಿಂದ ಅಗತ್ಯವಿರುವಷ್ಟು ಸಿಬ್ಬಂದಿಗಳನ್ನು ಮಾತ್ರ ಉಳಿಸಿಕೊಂಡು ಹೆಚ್ಚುವರಿ ಸಿಬ್ಬಂದಿಗಳನ್ನು ಕೂಡಲೇ ಬಿಡುಗಡೆಗೊಳಿಸುವುದು ಸಮಂಜಸವೆಂದು ತಿಳಿಸಿದ್ದು, ಅದೇ ರೀತಿ ಆರೋಗ್ಯ ಇಲಾಖೆಯಲ್ಲಿಯೂ ಸಹ ಹೆಚ್ಚುವರಿಯಾಗಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು ಅಗತ್ಯತೆಗೆ ಅನುಸಾರವಾಗಿ ನೇಮಕ ಮಾಡಿಕೊಂಡಲ್ಲಿ ಆರ್ಥಿಕವಾಗಿ ಸಾಕಷ್ಟು ಅನುಕೂಲವಾಗುವುದೆಂದು ಸಹ ತಿಳಿಸುತ್ತಾ ಹೆಚ್ಚುವರಿ ವೈದ್ಯರ ಹುದ್ದೆಗಳನ್ನು ಕೂಡಲೇ ರದ್ದು ಪಡಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ. ಮುಂದುವರೆದಂತೆ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ, ಅಕೌಂಟೆಂಟ್‌ಗಳು, ಲೆಕ್ಕಾಧೀಕ್ಷಕರುಗಳು ಮತ್ತು ಸಹಾಯಕ ನಿಯಂತ್ರಕರು(ಹಣಕಾಸು)ರವರುಗಳು ಹೆಚ್ಚುವರಿ ಸಂಖ್ಯೆಯಲ್ಲಿ ಪಾಲಿಕೆಗೆ ಬರುತ್ತಿದ್ದು, ಇದರಿಂದ ಪಾಲಿಕೆಯಲ್ಲಿ ಇರುವ ಅರ್ಹ ಸಿಬ್ಬಂದಿಗಳು ಅವಕಾಶ ವಂಚಿತರಾಗುತ್ತಿರುವುದರಿಂದ ಕೂಡಲೇ ಈ ಬಗೆಗೂ ಸಹ ಗಮನಹರಿಸಲು ಕೋರಿರುತ್ತಾರೆ.

ಅಧ್ಯಕ್ಷರು

ಸಿಬ್ಬಂದಿ ... ಸಮಿತಿ
... ನಗರ ಪಾಲಿಕೆ.

ಶ್ರೀ. ದಯಾನಂದ್, ಕಾರ್ಯದರ್ಶಿರವರು ಮಾತನಾಡುತ್ತಾ ಎಲ್ಲಾ ವಲಯ ಕಛೇರಿಗಳಿಗೂ ಉಪ ಆಯುಕ್ತರುಗಳನ್ನು ನೇಮಿಸುವುದು ಹಾಗೂ ಇವರುಗಳಿಗೆ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ಜಾಹಿರಾತು, ಮಾರುಕಟ್ಟೆ, ಆಸ್ತಿಗಳು, ಕಲ್ಯಾಣ ಹಾಗೂ ಕಂದಾಯ ಇಲಾಖೆಯ ಪೂರ್ಣ ಜವಾಬ್ದಾರಿಯನ್ನು ಅವರಿಗೆ ವಹಿಸುವುದು ಹಾಗೂ ಈ ಉಪ ಆಯುಕ್ತರ ಹುದ್ದೆಗಳನ್ನು ಪಾಲಿಕೆಯ ಅಧಿಕಾರಿಗಳಿಂದ ಮುಂಬಡ್ತಿಯ ಮೂಲಕ ತುಂಬಲು ಕ್ರಮಕೈಗೊಂಡಲ್ಲಿ ವಲಯ ವ್ಯಾಪ್ತಿಯಲ್ಲಿ ಮೇಲ್ಕಂಡ 5 ಇಲಾಖೆಗಳ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಸಾಧ್ಯವಾಗುವುದೆಂದು ತಿಳಿಸುತ್ತಾ, ಈ ಅಧಿಕಾರಿಗಳ ನಿಯಂತ್ರಣವನ್ನು ಮುಖ್ಯ ಕಛೇರಿಯಲ್ಲಿ ಹಾಲಿ ಇರುವ ಉಪ ಆಯುಕ್ತರು, ಕಂದಾಯ, ಕಲ್ಯಾಣ ಹಾಗೂ ಮಾರುಕಟ್ಟೆರವರ ಮೇಲುಸ್ತುವಾರಿಯಲ್ಲಿ ಸದರಿಯವರುಗಳು ಕಾರ್ಯ ನಿರ್ವಹಿಸಲು ಹಾಗೂ ಮುಖ್ಯ ಕಛೇರಿಯಲ್ಲಿರುವ ಪಾಲಿಕೆಯ ಉಪ ಆಯುಕ್ತರು ರವರುಗಳನ್ನು ಜಂಟಿ ಆಯುಕ್ತರ ಹುದ್ದೆಗೆ ಮೇಲ್ದರ್ಜೆಗೇರಿಸಲು ಸಹ ವಿನಂತಿಸಿರುತ್ತಾರೆ. ಈ ರೀತಿ ಹುದ್ದೆಗಳನ್ನು ಸೃಷ್ಟಿಸಿದ ಪಕ್ಷದಲ್ಲಿ ಪಾಲಿಕೆಗೆ ಹೆಚ್ಚಿನ ವರಮಾನ ಬರುವುದೇ ಅಲ್ಲದೇ ಪಾಲಿಕೆಯ ಆಸ್ತಿಗಳನ್ನು ಗುರುತಿಸಿ ಸಂರಕ್ಷಿಸಲು, ಪಾಲಿಕೆಯ ಮಾರುಕಟ್ಟೆಗಳ ಅಭಿವೃದ್ಧಿ, ಜಾಹಿರಾತು ಫಲಕಗಳಿಂದ ಉಂಟಾಗುತ್ತಿರುವ ಸೋರಿಕೆಯನ್ನು ತಡೆಗಟ್ಟಲು ಸಾಧ್ಯವಾಗುವುದು ಹಾಗೂ ಕಲ್ಯಾಣ ಇಲಾಖೆಯ ಹಲವು ಹತ್ತು ಕಾರ್ಯಕ್ರಮಗಳನ್ನು ಇನ್ನೂ ಸಮರ್ಪಕವಾಗಿ ನಿರ್ವಹಿಸಬಹುದಾಗಿದೆ ಎಂದು ತಿಳಿಸುತ್ತಾ, ಈ ಹಿನ್ನೆಲೆಯಲ್ಲಿ ಪಾಲಿಕೆಯ 8 ವಲಯಗಳಿಗೆ ಉಪ ಆಯುಕ್ತರ ಹುದ್ದೆ ಸೃಜಿಸುವುದು ಅವಶ್ಯಕವೆಂದು ತಿಳಿಸುರುತ್ತಾರೆ. ಇದೇ ರೀತಿ ಪಾಲಿಕೆಯ ಪಶುಸಂಗೋಪನೆ ಇಲಾಖೆ ಹಾಗೂ ಅರಣ್ಯ ಇಲಾಖೆಗಳನ್ನು ಹಾಲಿ ಬಿಳಿ ಆನೆ ಸಾಕುತ್ತಿರುವ ಅನುಭವವಾಗುತ್ತಿದ್ದು, ಈ ಎರಡು ಇಲಾಖೆಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ಮಾತ್ರ ಉಳಿಸಿಕೊಂಡು ಹೆಚ್ಚುವರಿ ಹುದ್ದೆಗಳನ್ನು ರದ್ದು ಪಡಿಸಲು ಕೋರಿರುತ್ತಾರೆ. ಹಾಲಿ ಇರುವ ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳ ಹುದ್ದೆಗೆ ಕಾನೂನು ಪದವೀಧರರ ವಿದ್ಯಾರ್ಹತೆಯನ್ನು ರದ್ದು ಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ. ಫಿಸಿಯೋ ಥೆರಪಿ ಹುದ್ದೆಗಳ ಅವಶ್ಯಕತೆ ಇಲ್ಲವೆಂದು ತಿಳಿಸಿರುತ್ತಾರೆ. ಪಾಲಿಕೆಯ ಆಸ್ಪತ್ರೆಗಳ ಕಾರ್ಯವೈಖರಿ ಕುರಿತಂತೆ ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲದೆ ಇರುವುದರಿಂದ ಹಾಲಿ ಹೆಚ್ಚುವರಿಯಾಗಿ ಇರುವ ವೈದ್ಯರ ಹುದ್ದೆಗಳನ್ನು ರದ್ದುಪಡಿಸತಕ್ಕದ್ದು ಹಾಗೂ ಹಲವು ವೈದ್ಯರುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಇರುವ ಕಾರಣ ಹಲವು ಯೋಜನೆಗಳು ನಿಷ್ಕ್ರಿಯವಾಗಿದ್ದು ಈ ಬಗೆಗೂ ಗಮನ ಹರಿಸಲು ಕೋರಿರುತ್ತಾರೆ.

ತೋಟಗಾರಿಕೆ ಇಲಾಖೆಯಲ್ಲಿ ಕೆಲವು ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ವಿದ್ಯಾರ್ಹತೆಯನ್ನು ಪದವೀದರರು ಎಂದು ನಿಗಧಿಪಡಿಸಿದ್ದು ಇದು ಸಮಂಜಸವಲ್ಲವೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರಿಗೆ ಇಲಾಖೆಯನ್ನು ಪೂರ್ಣ ಪ್ರಮಾಣದಲ್ಲಿ ಹತೋಟಿಯಲ್ಲಿಡುವ ಸಲುವಾಗಿ ಎಲ್ಲಾ ಚಾಲಕರ ನಿಯಂತ್ರಣವು ಒಂದೇ ಕಛೇರಿಯಲ್ಲಿ ಇವರುಗಳ ಸೇವಾ ಪುಸ್ತಕ ಹಾಗೂ ಸೇವಾ ವಿವರಗಳನ್ನು ಸಂಗ್ರಹಿಸಲು ಕ್ರಮ ಕೈಗೊಂಡಲ್ಲಿ ಚಾಲಕರುಗಳನ್ನು ಪೂರ್ಣ ಪ್ರಮಾಣದಲ್ಲಿ ನಿಯಂತ್ರಣದಲ್ಲಿಡಲು ಸಾಧ್ಯವೆಂದು ಅಭಿಪ್ರಾಯಿಸಿರುತ್ತಾರೆ.

ಶ್ರೀ. ಕೆ.ಟಿ. ನಾಗರಾಜ್, ಉಪಾಧ್ಯಕ್ಷರು ಮಾತನಾಡುತ್ತಾ, ಹಾಲಿ ಕಾಮಗಾರಿ ಇಲಾಖೆಯಲ್ಲಿ ಮಂಜೂರಾತಿ ಹುದ್ದೆಗಿಂತ ಹೆಚ್ಚುವರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಎರವಲು ಸೇವೆಯ ಮೇಲೆ ಹೆಚ್ಚುವರಿಯಾಗಿ ಅಭಿಯಂತರರು ಕಾರ್ಯನಿರ್ವಹಿಸುತ್ತಿದ್ದು, ಇದು ಪಾಲಿಕೆಯ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿದ್ದು ಕೂಡಲೇ ಎರವಲು ಸೇವೆಯ ಮೇಲೆ ನಿಯೋಜಿಸಲ್ಪಡುವ ಅಭಿಯಂತರರುಗಳ ಹುದ್ದೆಯನ್ನು ರದ್ದು ಪಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸ್ಥುತ ಪಾಲಿಕೆಯ ಆರ್ಥಿಕ ಹಿತದೃಷ್ಠಿಯನ್ನು ಗಮನದಲ್ಲಿಟ್ಟಕೊಂಡು ಎರವಲು ಸೇವೆಯ ಮೇಲೆ ನಿಯೋಜನೆ ಮಾಡುವುದನ್ನು ತಡೆಯಲು ಕೋರಿರುತ್ತಾರೆ. ಹಾಲಿ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಮಾರ್ಪಟ್ಟಿರುವುದರಿಂದ ಹಾಲಿ ಇರುವ ಒಬ್ಬ ಪ್ರಧಾನ ಅಭಿಯಂತರರೊಂದಿಗೆ ಮತ್ತೊಬ್ಬ ಪ್ರಧಾನ ಅಭಿಯಂತರರ ಹುದ್ದೆಯನ್ನು ಸೃಜಿಸಲು ಕೋರಿರುತ್ತಾರೆ. ಒಬ್ಬ ಪ್ರಧಾನ ಅಭಿಯಂತರರು ಯೋಜನೆಗಳನ್ನು ನೋಡಿಕೊಂಡರೆ, ಮತ್ತೊಬ್ಬ ಪ್ರಧಾನ ಅಭಿಯಂತರರು ವಾರ್ಡ್‌ಮಟ್ಟದ ಕಾಮಗಾರಿಗಳನ್ನು ನೋಡಿಕೊಳ್ಳಲು ಸರಿಹೋಗುತ್ತದೆ ಎಂದು ತಿಳಿಸಿರುತ್ತಾರೆ. ಪ್ರತಿಯೊಂದು ಇಲಾಖಾ ಮುಖ್ಯಸ್ಥರಿಗೆ ಸಹಾಯಕ ನಿಯಂತ್ರಕರು(ಹಣಕಾಸು) ಹುದ್ದೆ ಅವಶ್ಯಕತೆ ಇರುವುದಿಲ್ಲ, ಲೆಕ್ಕ ಅಧೀಕ್ಷಕರ ಹುದ್ದೆ ಸಾಕು ಎಂದು ತಿಳಿಸಿರುತ್ತಾರೆ ಹಾಗೂ ಸರ್ಕಾರದ ಹಂತದಲ್ಲಿ ಕರೆಯುವ ಸಭೆಗಳಲ್ಲಿ ಪ್ರಧಾನ ಅಭಿಯಂತರರ ಹಂತದ ಅಧಿಕಾರಿಗಳು ಭಾಗವಹಿಸಬೇಕಾಗಿರುವುದರಿಂದ ಎರಡು ಪ್ರಧಾನ ಅಭಿಯಂತರರ ಹುದ್ದೆ ಅವಶ್ಯವೆಂದು, ಈ ಹುದ್ದೆಗಳನ್ನು ಪಾಲಿಕೆಯ ಅಭಿಯಂತರರ ವರ್ಗದಿಂದ ತುಂಬಲು ಕೋರಿರುತ್ತಾರೆ. ಹಾಲಿ 8 ವಲಯಗಳಿಗೂ ಸಹ 8 ಜನ ಮುಖ್ಯ ಅಭಿಯಂತರರುಗಳನ್ನು ನೇಮಿಸಲು ಕೋರಿರುತ್ತಾರೆ ಹಾಗೂ 8 ಜನ ಅಧೀಕ್ಷಕ ಅಭಿಯಂತರರುಗಳ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ.

ಪ್ರತಿ ವಾರ್ಡ್‌ಗೆ ಒಟ್ಟು 8 ಜನ ಗ್ಯಾಂಗ್‌ಮೆನ್‌ಗಳ ಅವಶ್ಯಕತೆ ಇದ್ದು ಈ ಹಿನ್ನೆಲೆಯಲ್ಲಿ ರದ್ದು ಪಡಿಸಲು ಉದ್ದೇಶಿಸಿರುವ ಗ್ಯಾಂಗ್‌ಮೆನ್‌ಗಳನ್ನು ಮುಂದುವರೆಸಲು ಕೋರಿರುತ್ತಾರೆ. ಈ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಪಕ್ಷದಲ್ಲಿ ಅವರನ್ನು ನಿಯಂತ್ರಿಸಲು ಸಾಧ್ಯವಿಲ್ಲದೇ ಇರುವುದರಿಂದ ಹಾಲಿ ಮಂಜೂರಾತಿಯಾಗಿರುವ ಗ್ಯಾಂಗ್‌ಮೆನ್ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಹಾಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ಯಾಂಗ್‌ಮೆನ್‌ಗಳ



ಅಧ್ಯಕ್ಷರು

ನಿಯೋಜನೆ ರದ್ದುಪಡಿಸಿ ಅವರ ಮೂಲ ಹುದ್ದೆಗೆ ಹಿಂದಿರುಗಿಸುವುದು ಸಮಂಜಸವೆಂದೂ ಸಹ ತಿಳಿಸಿರುತ್ತಾರೆ. ಇದಕ್ಕೆ ಶ್ರೀ ಅಶ್ವಥ್ ಹೆಚ್.ವಿ. ಖಜಾಂಚಿರವರು ತಮ್ಮ ಸಹಮತ ವ್ಯಕ್ತಪಡಿಸುತ್ತಾ ವಿದ್ಯುತ್ ವಿಭಾಗಕ್ಕೂ ಸಹ ಮುಖ್ಯ ಅಭಿಯಂತರರ ಹುದ್ದೆ ಅವಶ್ಯವಿದ್ದು ಸದರಿ ಹುದ್ದೆಯನ್ನು ಸಹ ಪಾಲಿಕೆಯ ಅಭಿಯಂತರರ ಹುದ್ದೆಯಿಂದಲೇ ತುಂಬಲು ಕೋರಿರುತ್ತಾರೆ.

ಶ್ರೀ. ಮಾಯಣ್ಣ ರವರು ಮಾತನಾಡುತ್ತಾ, ಪಾಲಿಕೆಯಲ್ಲಿ ಆಡಿಟ್ ವಿಭಾಗದಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದ ವೃಥಾ ಕಾರಣ ತೊಂದರೆ ಉಂಟಾಗುತ್ತಿದ್ದು, ಸದರಿಯವರ ನಿಯೋಜನೆಯನ್ನು ರದ್ದುಪಡಸಿ ಪಾಲಿಕೆ ಸಿಬ್ಬಂದಿಗಳ ವರ್ಗದಿಂದಲೇ ಲೆಕ್ಕ ಪರಿಶೋಧನೆ ಕಾರ್ಯವನ್ನು ನಡೆಸಬಹುದಾಗಿರುತ್ತದೆ. ಒಂದು ಪಕ್ಷ ಎರವಲು ಸೇವೆಯ ಸಿಬ್ಬಂದಿಗಳ ಅವಶ್ಯಕತೆ ಕಂಡು ಬಂದಲ್ಲಿ ಶೇ. 10ರಷ್ಟು ನೌಕರರನ್ನು ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳುವುದು ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಶ್ರೀ. ರಾಜಣ್ಣ ರವರು ಮಾತನಾಡುತ್ತಾ, ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್‌ಗಳ ಪೈಕಿ ಶೇ. 50ರಷ್ಟು ಸಿಬ್ಬಂದಿಗಳು ನಿಯೋಜನೆ ಮೇಲೆ ನಾಲ್ಕನೇ ದರ್ಜೆ ನೌಕರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಹೆಚ್ಚಿನ ಸಂಖ್ಯೆ ಗ್ಯಾಂಗ್‌ಮೆನ್‌ಗಳು ಕೌನ್ಸಿಲ್ ಕಾರ್ಯಾಲಯದಲ್ಲಿ ಟಪಾಲು ರವಾನೆಗಾರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರ ನಿಯೋಜನೆಯನ್ನು ರದ್ದುಪಡಿಸಿದಲ್ಲಿ ಇವರ ಮೂಲ ಹುದ್ದೆಯಾದ ಗ್ಯಾಂಗ್‌ಮೆನ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದೆಂದು ತಿಳಿಸುತ್ತಾ ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದು ಸಮಂಜಸವೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು ಮಾತನಾಡುತ್ತಾ, ಮೇಲ್ಕಂಡ ಅಂಶಗಳನ್ನು ಕೂಲಂಕುಷವಾಗಿ ಸಮಿತಿಯ ಸದಸ್ಯರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಕಂದಾಯ ಇಲಾಖೆಯ ಪ್ರಸ್ಥಾವನೆಗೆ ಸಂಬಂಧಿಸಿದಂತೆ ಸಭೆಯನ್ನು ದಿನಾಂಕ:13.09.2012ರಂದು ಬೆಳಿಗ್ಗೆ 11.00ಗಂಟೆಗೆ ಮುಂದೂಡಿದೆ.

(signature)

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 13.09.2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ಕುರಿತಂತೆ ಪಾಲಿಕೆಯ ಚುನಾಯಿತ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ನಾಜಿನಿ ಬೇಗಂ | ಸದಸ್ಯರು | ವಿಶೇಷ ಅಧಿಕಾರಿ |
| 3 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿ (ವೃಂದಾ ಮತ್ತು ನೇಮಕಾತಿ ನಿಯಮಾವಳಿ) |
| 4 | ಜೆ. ಭುವನೇಶ್ವರಿ | ಸದಸ್ಯರು | **ಹಾಜರಿದ್ದ ಸಂಘದ ಪದಾಧಿಕಾರಿಗಳು** |
| 5 | ಎಲ್.ನಾಗರತ್ನ | ಸದಸ್ಯರು | ಶ್ರೀ. ಸುಬ್ರಮಣ್ಯಂ, ಅಧ್ಯಕ್ಷರು |
| 6 | ರವೀಂದ್ರನ್ ಕೆ | ಸದಸ್ಯರು | ಶ್ರೀ. ಕೆ.ಟಿ. ನಾಗರಾಜು, ಉಪಾಧ್ಯಕ್ಷರು |
| 7 | ಎನ್. ಶಾಂತಕುಮಾರಿ | ಸದಸ್ಯರು | ಶ್ರೀ. ಪಿ. ದಯಾನಂದ್, ಕಾರ್ಯದರ್ಶಿಗಳು |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | ಶ್ರೀ. ಬಾಬು, ಜಂಟಿ ಕಾರ್ಯದರ್ಶಿ |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | ಶ್ರೀ. ಚ. ನಾಗರಾಜು, ಸಂಚಾಲಕರು |
| 10 | ರಾಜಣ್ಣ | ಸದಸ್ಯರು | ಶ್ರೀಮತಿ. ಮಂಜುಳ ಬಿ.ಡಿ. ನಿರ್ದೇಶಕರು |
| | | | ಶ್ರೀ. ಹೆಚ್.ಎನ್. ಬಸವರಾಜು, ನಿರ್ದೇಶಕರು |
| | | | ಶ್ರೀ. ರುದ್ರೇಶ್, ನಿರ್ದೇಶಕರು |
| | | | ಶ್ರೀ. ಮಾಯಣ್ಣ, ನಿರ್ದೇಶಕರು |

ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸಂಬಂಧಿಸಿದಂತೆ, ಕೇಂದ್ರ ಕಛೇರಿ ಮತ್ತು ವಲಯಗಳ ಪ್ರತಿಯೊಂದು ಇಲಾಖೆಯಲ್ಲಿರುವ ಸಿಬ್ಬಂದಿಗಳ ಬಗ್ಗೆ ವಿಶೇಷಾಧಿಕಾರಿ(ವೃಂದ ಮತ್ತು ನೇಮಕಾತಿ)ರವರು ಸಂಕ್ಷಿಪ್ತವಾಗಿ ವಿವರಿಸಿದರು. ಪಾಲಿಕೆಯ ನೌಕರರ ಸಂಘದ ಮುಖ್ಯಸ್ಥರು ಪಾಲಿಕೆಯ ನೌಕರರ ಹಿತದೃಷ್ಟಿಯಿಂದ, ಯಾವ ಯಾವ ಇಲಾಖೆಯಲ್ಲಿ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆಯೋ ಆ ಇಲಾಖೆಯಲ್ಲಿ ಸಿಬ್ಬಂದಿಗಳನ್ನು ಸೃಜಿಸಲು ಹಾಗೂ ಯಾವ ಇಲಾಖೆಗಳಲ್ಲಿ ಅನವಶ್ಯಕ ಹುದ್ದೆಗಳಿದ್ದರೆ, ಅಂತಹ ಸಿಬ್ಬಂದಿಗಳ ಹುದ್ದೆಗಳನ್ನು ರದ್ದುಪಡಿಸಲು ಹಾಗೂ ನೌಕರರಿಗೆ ನೀಡುವ ಬಡ್ತಿಯ ಅನುಪಾತದ ಬಗ್ಗೆ ಚರ್ಚಿಸಿದರು. ಅದರಲ್ಲಿ ಮುಖ್ಯವಾದ ಅಂಶಗಳು ಕೆಳಕಂಡಂತಿವೆ:

1. ಕೇಂದ್ರ ಕಛೇರಿಯಲ್ಲಿ ಹಾಲಿ ಇರುವ ಉಪ ಆಯುಕ್ತರ ಹುದ್ದೆಗೆ ಬದಲಾಗಿ ಜಂಟಿ ಆಯುಕ್ತರ ಹುದ್ದೆಗೆ ಮೇಲ್ದರ್ಜೆಗೇರಿಸಿ ಸದರಿ ರವರುಗಳಿಂದ ಐದು ಇಲಾಖೆಗಳಾದ ಕಲ್ಯಾಣ, ಜಾಹಿರಾತು, ಆಸ್ತಿಗಳು, ಕಂದಾಯ, ಆಡಳಿತ ವಿಭಾಗದ ಜವಾಬ್ದಾರಿಯನ್ನು ನೀಡಿದರೆ ಮೇಲ್ಕಂಡ ಐದು ಇಲಾಖೆಗಳ ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗಬಹುದೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

2. ಉಪ ಆಯುಕ್ತರು(ಕಂದಾಯ)ರವರ ಕಛೇರಿಯಲ್ಲಿ ಲೆಕ್ಕಾಧೀಕ್ಷಕರು ಮತ್ತು ದಫೇದಾರ್ ಹುದ್ದೆಯ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ವಲಯ ಮಟ್ಟದ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಶೀಘ್ರಲಿಪಿಗಾರರ ಹುದ್ದೆಯ ಬದಲಾಗಿ ಈ ಇಲಾಖೆಗೆ computerನಲ್ಲಿ ಮಾನ್ಯತೆ ಪಡೆದಿರುವ ಸಂಸ್ಥೆಗಳಿಂದ ಡಿಪ್ಲೊಮೊ ಸರ್ಟಿಫಿಕೇಟ್ ಹೊಂದಿರುವಂತಹ ಡಾಟಾ ಎಂಟ್ರಿ ಆಪರೇಟರ್ಸ್ ಅನ್ನು ನೀಡಲು ಸೂಚಿಸಿದರು.

3. ವಲಯ ಮಟ್ಟದ ವ್ಯಾಪ್ತಿಯ ಸಹಾಯಕ ಕಂದಾಯ ಅಧಿಕಾರಿ ಕಛೇರಿಗಳಲ್ಲಿ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸುವುದಕ್ಕಾಗಿ ದಫ್ತರ್‌ಬಂದ್ ಹುದ್ದೆಯು ಇದ್ದು, ಅಗತ್ಯ ವಿದ್ಯಾರ್ಹತೆ ನಿಗಧಿಪಡಿಸಿದ ಪಕ್ಷದಲ್ಲಿ ದಾಖಲೆ ಪತ್ರಗಳ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದರಿಂದ, ದಫ್ತರ್‌ಬಂದ್ ಹುದ್ದೆಯ ಬದಲು ಗ್ರೂಪ್–ಸಿ ಹುದ್ದೆಯಾದ ದ್ವಿತೀಯ ದರ್ಜೆ ಸಹಾಯಕರು ಅಥವಾ ರೆಕಾರ್ಡ್ ಕೀಪರ್ ಎಂದು ಮರುನಾಮಕರಣ ಮಾಡುವುದು ಸೂಕ್ತ ಎಂದು ತಿಳಿಸಿದರು.

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತೆರಿಗೆ ವಸೂಲಿಗಾರರು, ಕಂದಾಯ ಪರಿವೀಕ್ಷಕರು ಹುದ್ದೆಗಳಿದ್ದು, ಈ ಎರಡು ಹುದ್ದೆಗಳ ಪದನಾಮಗಳ ಪೈಕಿ Tax Inspector ಹುದ್ದೆಯನ್ನು Bill Collector ಎಂದು ಬದಲಾಯಿಸುವುದು ಸೂಕ್ತವೆಂದು ತಿಳಿಸಿದರು.

5. ವಲಯ ಮಟ್ಟದ ಅಭಿಲೇಖನಾಲಯದಲ್ಲಿ ದಫ್ತರ್‌ಬಂದ್ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವುದರಿಂದ, ದ್ವಿತೀಯ ದರ್ಜೆ ಸಹಾಯಕರ ಹುದ್ದೆಯು ಅವಶ್ಯಕತೆ ಇಲ್ಲವೆಂದು ಅದರ ಬದಲು Record Keeper ಎಂದು ಮಾಡುವುದು ಸೂಕ್ತ ಎಂದು ತಿಳಿಸಿದರು.

6. ಮಾರ್ಕೆಟ್ ವಿಭಾಗದ ಉಪ ಆಯುಕ್ತರ ಹುದ್ದೆಯನ್ನು ಜಂಟಿ ಆಯುಕ್ತರ ಹುದ್ದೆಗೆ ಮೇಲ್ದರ್ಜೆಗೆ ಏರಿಸುವುದು ಸೂಕ್ತ ಎಂದು ತಿಳಿಸಿದರು.

7. ನಾಗರೀಕ ಸೇವಾ ಕೇಂದ್ರದ ಅವಶ್ಯಕತೆ ಇಲ್ಲದ್ದಿದ್ದು ಅದರ ಬದಲಿಗೆ ಬೆಂಗಳೂರು ಒನ್ ಕೇಂದ್ರಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಪಾಲಿಕೆಯ ಸಿಬ್ಬಂದಿಗಳೇ ಬೆಂಗಳೂರು ಒನ್ ಕೇಂದ್ರಗಳಲ್ಲಿ ಮಾಡುವ ಕೆಲಸಗಳನ್ನು ಮಾಡಿದ ಪಕ್ಷದಲ್ಲಿ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ರೀತಿಯ ಅನುಕೂಲವಾಗುವುದೆಂದು ತಿಳಿಸಿದರು.

8. ಹಾಲಿ ಇರುವ ಉಪ ಆಯುಕ್ತರು(ಕಂದಾಯ) ಹುದ್ದೆಯನ್ನು ಜಂಟಿ ಆಯುಕ್ತರು(ಕಂದಾಯ) ಹುದ್ದೆಗೆ ಮೇಲ್ದರ್ಜೆ ಏರಸಬಹುದೆಂದು ಕೋರಿರುತ್ತಾರೆ.

ಈ ಸಂದರ್ಭದಲ್ಲಿ ಸಮಿತಿಯ ಸದಸ್ಯರಗಳು ಪಾಲಿಕೆಯ ಅಧಿಕಾರಿಗಳನ್ನು ಜಂಟಿ ಆಯುಕ್ತರ ಹುದ್ದೆಗೆ ನೇಮಕ ಮಾಡುವುದು ನಿಯಮಾವಳಿಗಳ ವಿರುದ್ಧವಾಗುವುದರಿಂದ ಈ ಪ್ರಸ್ಥಾವನೆಯನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ, ಕೆ.ಎ.ಎಸ್ ಹಿರಿಯ ಶ್ರೇಣಿಯ ಅಧಿಕಾರಿಗಳಿಂದ ಜಂಟಿ ಆಯುಕ್ತರ ಹುದ್ದೆಯನ್ನು ನಿಯೋಜನೆ ಮೇರೆಗೆ ಭರ್ತಿ ಮಾಡುವುದು ಸಮಂಜಸವೆಂದು ತಿಳಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

9. ಕನ್ನಡ ಭಾಷಾಂತರಗಾರರ ಹುದ್ದೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಇಲ್ಲದಿರುವುದರಿಂದ ಆ ಹುದ್ದೆಯನ್ನು ರದ್ದುಪಡಿಸಲು ಸೂಚಿಸಿದರು.

10. ಪಾಲಿಕೆಯಲ್ಲಿ ಒಂದು ರೆಕಾರ್ಡಿಂಗ್ ಆಫೀಸರ್ ಹುದ್ದೆ ಇದ್ದು, ಉಪ ಕಂದಾಯ ಅಧಿಕಾರಿ ಹುದ್ದೆ ಮುಂಬಡ್ತಿಗೆ 1:10ರ ಅನುಪಾತದಲ್ಲಿ ಸಹಾಯಕ ಕಂದಾಯ ಅಧಿಕಾರಿಗಳೊಂದಿಗೆ ನೀಡುತ್ತಿದ್ದು, ಪ್ರಸ್ಥುತ ಇದನ್ನು ಸರಿಪಡಿಸಿ ಸಂಯೋಜಿತ ಸೇವಾ ಹಿರಿತನದ ಆಧಾರ ಮೇಲೆ ಮುಂಬಡ್ತಿಗೆ ಪರಿಗಣಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ.

11. ತೋಟಗಾರಿಕಾ ವಿಭಾಗದಲ್ಲಿ ಮೇಸ್ತ್ರಿಗಳ ಹುದ್ದೆಗೆ 9ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಎಂದು ವಿದ್ಯಾರ್ಹತೆ ನಿಗಧಿಪಡಿಸಲು, ಗಾರ್ಡನರ್ ಹುದ್ದೆಗೆ 4ನೇ ತರಗತಿ ಹಾಗೂ ಮೇಸ್ತ್ರಿ ಹುದ್ದೆಗೆ 7ನೇ ತರಗತಿ ವಿದ್ಯಾರ್ಹತೆ ನಿಗಧಿಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ. ಹಾಲಿ ಗಾರ್ಡನರ್‌ಗಳ ಹುದ್ದೆಗೆ ಶೇಕಡ.50ರಷ್ಟು ಮುಂಬಡ್ತಿ ಮೂಲಕ, ಶೇಕಡ 50ರಷ್ಟು ನೇರ ನೇಮಕಾತಿ ಇದ್ದು, ಇದನ್ನು ಶೇಕಡ 100ರಷ್ಟು ನೇರ ನೇಮಕಾತಿ ಮಾಡಬೇಕೆಂದು ತಿಳಿಸಿದರು.

12. ಸಸ್ಯ ಅಭಿವೃದ್ಧಿಗಾರ ಹುದ್ದೆಗೆ ಎಸ್.ಎಸ್.ಎಲ್.ಸಿ ಮಾಡಿರಬೇಕು. ಆದ್ದರಿಂದ ಗಾರ್ಡನರ್ ಹುದ್ದೆಗೆ 9ನೇ ತರಗತಿ ವಿದ್ಯಾರ್ಹತೆ ಹೊಂದಿರಬೇಕು ಎಂದು ತಿಳಿಸಿದರು.

13. ತೋಟಗಾರಿಕಾ ಪರಿವೀಕ್ಷರ ಹುದ್ದೆಗೆ ಬಡ್ತಿ ನೀಡುವಾಗ, ಅವರ ಸೇವೆಯನ್ನು 5 ವರ್ಷಗಳಿಂದ 3 ವರ್ಷಗಳಿಗೆ ನೀಡಬೇಕು ಎಂದು ತಿಳಿಸಿದರು.

14. ಸಹಾಯಕ ನಿರ್ದೇಶಕರು(ತೋಟಗಾರಿಕೆ) ಹಾಗೂ ತೋಟಗಾರಿಕಾ ಅಧೀಕ್ಷಕರ ಹುದ್ದೆಗಳನ್ನು ಎರವಲು ಸೇವೆಯ ಬದಲಾಗಿ ಪಾಲಿಕೆಯಲ್ಲಿಯೇ ಈ ಹುದ್ದೆಗಳಿಗೆ ಬೇಕಾದಂತಹ ವಿದ್ಯಾರ್ಹತೆ ಹೊಂದಿರುವ ನೌಕರರುಗಳಿದ್ದು ಇಂತಹ ನೌಕರರುಗಳಿಂದ ತುಂಬಲು ಕ್ರಮ ಕೈಗೊಂಡಲ್ಲಿ ಅರ್ಹ ನೌಕರರುಗಳಿಗೆ ಅವಕಾಶ ಒದಗಿಸಿದಂತಾಗುವುದೇ ಅಲ್ಲದೇ ಪಾಲಿಕೆಗೆ ಆರ್ಥಿಕವಾಗಿ ಉಳಿತಾಯವಾಗುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.

15. ಕಲ್ಯಾಣ ವಿಭಾಗದಲ್ಲಿ Filed Assistant/Community Organizer ಹುದ್ದೆಯನ್ನು ರದ್ದುಪಡಿಸಿ ಈ ಜವಾಬ್ದಾರಿಯನ್ನು ಕಂದಾಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಂದಾಯ ಇಲಾಖೆಗೆ ನೀಡಿದ್ದಲ್ಲಿ ಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿಸಬಹುದೆಂದು ತಿಳಿಸಿದರು.

16. ಜಂಟಿ ಆಯುಕ್ತರು(ಕಲ್ಯಾಣ) ಹುದ್ದೆಯ ಅವಶ್ಯಕತೆ ಇಲ್ಲವೆಂದು, ಕಲ್ಯಾಣ ವಿಭಾಗವನ್ನು ಕಂದಾಯ ಇಲಾಖೆಗೆ ಲಿಂಕ್-ಅಪ್ ಮಾಡುವುದು ಸೂಕ್ತವೆಂದು ತಿಳಿಸಿದರು.

17. ಟೈಪಿಸ್ಟ್/ಡಾಟಾ ಎಂಟ್ರಿ ಆಪರೇಟರ್ಸ್ ಅನ್ನು ನೇಮಕಾತಿ ಮಾಡುವಾಗ ಕೇವಲ ಎಂ.ಎಸ್. ಆಫೀಸ್ ಸರ್ಟಿಫಿಕೇಟ್ ಅನ್ನು ಗಣನೆಗೆ ತೆಗೆದುಕೊಳ್ಳದೆ, ಮಾನ್ಯತೆ ಪಡೆದ ತರಬೇತಿ ಕೇಂದ್ರಗಳಿಂದ ಕಂಪ್ಯೂಟರ್‌ನಲ್ಲಿ ಡಿಪ್ಲೊಮಾ ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

18. ಗ್ರೂಪ್–'ಡಿ' ಹುದ್ದೆಯನ್ನು ನೇಮಕಾತಿ ಮಾಡುವಾಗ 7ನೇ ತರಗತಿ ಪಾಸಾಗಿರಬೇಕು ಎಂದು ವಿದ್ಯಾರ್ಹತೆ ಇದ್ದು, ಅದನ್ನು 9ನೇ ತರಗತಿ ಉತ್ತೀರ್ಣರಾಗಿರಬೇಕು ಎಂದು ಮಾಡುವುದು ಸೂಕ್ತ ಎಂದು ತಿಳಿಸಿದರು.

19. ಸಾಂಖ್ಯಿಕ ವಿಭಾಗದಲ್ಲಿ ಜಂಟಿ ನಿರ್ದೇಶಕರು(ಸಾಂಖ್ಯಿಕ) ಹುದ್ದೆಯನ್ನು ರದ್ದು ಪಡಿಸಲು, ಸಾಂಖ್ಯಿಕ ಪರಿವೀಕ್ಷರ ಹುದ್ದೆಯು 8 ಇದ್ದು, ಆ ಹುದ್ದೆಯ ಅವಶ್ಯಕತೆ ಇಲ್ಲವೆಂದು, ಅದರ ಬದಲು ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ನೀಡಬೇಕೆಂದು ತಿಳಿಸಿದರು.

20. ನಿಯಂತ್ರಣ ಕೊಠಡಿ ಬದಲು Enforcement Cell/Disaster Mangement Cell ಎಂದು ಮರುನಾಮಕರಣ ಮಾಡಿ, ದಕ್ಷ ಅಧಿಕಾರಿಗಳನ್ನೊಳಗೊಂಡ (ತಾಂತ್ರಿಕ, ಆರೋಗ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳನ್ನು) ತಂಡವನ್ನು ರಚಿಸುವುದು ಸೂಕ್ತ ಎಂದು ತಿಳಿಸಿದರು.

21. ವಲಯ ಕಛೇರಿಯಲ್ಲಿನ ಕಂದಾಯ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಲು ಸಹ ಸೂಚಿಸಲಾಗಿರುತ್ತದೆ.

22. ಸಾಂಖ್ಯಿಕ ವಿಭಾಗದಲ್ಲಿ ಜಂಟಿ ನಿರ್ದೇಶಕರು(ಸಾಂಖ್ಯಿಕ) ಹಾಗೂ ಅವರ ಅಧೀನ ಅಧಿಕಾರಿಗಳು ತಮಗೆ ವಹಿಸಿರುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗಿದ್ದು ಹಾಗೂ ವಾರ್ಷಿಕ ಆಡಳಿತಾತ್ಮಕ ವರದಿಯನ್ನು ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಕಳೆದ 10 ವರ್ಷಗಳಿಂದ ವಿಫಲರಾಗಿರುವುದರಿಂದ ಇವರ ಎರವಲು ಸೇವೆಯನ್ನು ರದ್ದು ಪಡಿಸಲು ಸಹ ಕೋರಿರುತ್ತಾರೆ. ಈ ಬಗ್ಗೆ ಕಛೇರಿ ದಾಖಲಾತಿ ಪರಿಶೀಲಿಸಲಾಗಿ ಕಳೆದ ಹಲವಾರು ವರ್ಷಗಳಿಂದ ಆಡಳಿತಾತ್ಮಕ ವರದಿಯನ್ನು ಪಾಲಿಕೆಯ ಸಭೆಯಲ್ಲಿಟ್ಟು ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿಲ್ಲದೇ ಇದ್ದು, ಇದು ಅಂಕಿ ಅಂಶ ಅಧಿಕಾರಿಗಳ ಕರ್ತವ್ಯ ಲೋಪವನ್ನು ಎತ್ತಿ ತೋರುತ್ತದೆ. ಕೂಡಲೇ ಸದರಿಯವರಿಗೆ ಈ ಬಗ್ಗೆ ಗಮನ ಹರಿಸಿ ಕಾರ್ಯನಿರ್ವಹಿಸಲು ಸಹ ಈ ಸಂದರ್ಭದಲ್ಲಿ ಸೂಚಿಸಲಾಗಿರುತ್ತದೆ. ಅಂಕಿ ಅಂಶ ವಿಭಾಗದಲ್ಲಿ ಜಂಟಿ ನಿರ್ದೇಶಕರು (ಸಾಂಖ್ಯಿಕ) ಹುದ್ದೆಯ ಅವಶ್ಯಕತೆ ಇಲ್ಲದೇ ಇರುವುದರಿಂದ ಈ ಹುದ್ದೆಯನ್ನು ರದ್ದು ಪಡಿಸಲು ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಪಾಲಿಕೆಯ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಅಗತ್ಯ ಬದಲಾವಣೆ ತರುವ ಕುರಿತಂತೆ ಜಂಟಿ ಸಮಿತಿಯ ಮುಂದೆ ಮತ್ತೊಮ್ಮೆ ಪ್ರಸ್ಥಾವನೆಯನ್ನು ಮಂಡಿಸಲು ತೀರ್ಮಾನಿಸಿ ವಂದನೆಯೊಂದಿಗೆ ಸಭೆಯು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.